ಸಂಪುಟ : 9 ಸಂಚಿಕೆ 240 ಪುಟ : 8 ಬೆಲೆ: 3.00 ಶುಕ್ರವಾರ ನವೆಂಬರ್ 1 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 9 Issue : 240 Pages : 8 Price : 3.00 Friday November 1 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25




## 2024-25 ಆರ್ಥಿಕ ವರ್ಷದಲ್ಲಿ ಕರ್ನಾಟಕ ಉತ್ತಮ ವಿತ್ತೀಯ ಸಾಧನೆ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ರಾಜ್ಯದ ಆದಾಯ ಸಂಗ್ರಹಲ್ಲಿ ಗಣನೀಯ ಪ್ರಗತಿ ಸಾಧಿಸಿದ್ದು, ಆರ್ಥಿಕ ವರ್ಧ 7 ತಿಂಗಳಲ್ಲಿಯೇ ಶೇ.53ರಷ್ಟು ಗುರಿ ಮುಟ್ಟಲಾಗಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ರಾಜ್ಯ 1.95 ಲಕ್ಷ ಕೋಟಿ ರೂ.ಆದಾಯ ಸಂಗ್ರಹ ಗುರಿ ಹೊಂದಿದ್ದು, ಅಕ್ಟೋಬರ್ ಅಂತ್ಯದ ವೇಳೆಗೆ 1.03 ಲಕ್ಷ ಕೋಟಿ ರೂ.ಆದಾಯ ಸಂಗ್ರಹಿಸುವ ಮೂಲಕ ನಿಗದಿತ ಗುರಿಯ ಶೇ.53ರಷ್ಟು ಗುರಿ ಮುಟ್ಟಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಆದಾಯ ಸಂಗ್ರಹದಲ್ಲಿ ಶೇ,11.2ರಷ್ಟು ಪ್ರಗತಿ ಸಾಧಿಸಿದೆ ಎಂದು ರಾಜ್ಯ ಸರ್ಕಾರ ಪ್ರಕಟಣೆಯಲ್ಲಿ ತಿಳಿಸಿದೆ.

### ಲಕ್ಷ್ಮೇಶ್ವರ ತಾಲೂಕಿನಾದ್ಯಂತ ಹಬ್ಬದ ಸಡಗರ ಜೋರು । ಮಾರುಕಟ್ಟೆಯಲ್ಲಿ ಖರೀದಿ ಭರಾಟೆ

# ದೀಪಾವಳಿ ಹಬ್ಬ ಆಚರಿಸೋಣ ಬನ್ನಿ...

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ದೀಪಾವಳಿ ಹಬ್ಬದ ಸಂಭ್ರಮ ತಾಲೂಕಿನೆಲ್ಲೆಡೆ ಕಂಡುಬರುತ್ತಿದೆ. ಹಬ್ಬದ ಪ್ರಯುಕ್ತ ನರಕಚತುರ್ದಶಿ ದಿನವಾದ ಗುರುವಾರ ಪಟ್ಟಣದಲ್ಲಿ ಬಹುತೇಕ ಮನೆಗಳಲ್ಲಿ ನಸುಕಿನಲ್ಲಿಯೇ ಕುಟುಂಬ ವರ್ಗದವರಿಗೆ ಆರತಿ ಮಾಡಿ ನಂತರ ಅಭ್ಯಂಗ ಸ್ನಾನ ಮಾಡುವದು ಕಂಡುಬಂದಿತು.

ಕೃಷ್ಣ ಪರಮಾತ್ಮ ನರಕಾಸುರನ್ನು ವಧೆ ಮಾಡಿದ ಸಂಕೇತವಾಗಿ ನರಕಚತುರ್ದಶಿಯನ್ನು ಆಚರಿಸುತ್ತಾರೆ. ವಿಜಯದ ಸಂಕೇತವಾಗಿ ದೀಪಗಳನ್ನು ಬೆಳಗಿಸುವದು, ಅದೇ ರೀತಿ ಎಲ್ಲರ ಮನೆಯಲ್ಲಿ ಕುಟುಂಬವರ್ಗದ ಶ್ರೇಯೋಭಿವೃದ್ಧಿಗಾಗಿ ಆರತಿ ಮಾಡುವದು, ನಂತರ ಅಭ್ಯಂಗ ಸ್ನಾನ ಮಾಡುವ ಮೂಲಕ ನರಕಚತುರ್ದಶಿಯನ್ನು ಆಚರಿಸುತ್ತಾರೆ. ಹಿಂದಿನ ನೀರು ತುಂಬುವ ಹಬ್ಬವನ್ನು ಆಚರಿಸಿ ಮರುದಿನ ಸೂರ್ಯೋದಯಕ್ಕೂ ಮುನ್ನ ಎಲ್ಲರ ಮನೆಯ ಬಾಗಿಲಿಗೆ



ದೀಪಗಳನ್ನು ಬೆಳಗಿಸಿ ನಂತರ ಮನೆಮಂದಿಗೆಲ್ಲ ಆರತಿ ಮಾಡುವದು ಸಂಪ್ರದಾಯವಾಗಿದ್ದು, ಮನೆಮಂದಿಗೆ ಆರತಿ ಮಾಡುವ ಮೊದಲು ತುಳಸಿದೇವಿಗೂ ಆರತಿ ಬೆಳಗುವದು ವಾಡಿಕೆಯಾಗಿದೆ.

ಪಟ್ಟಣದಲ್ಲಿ ಹತ್ತಾರು ಗ್ರಾಮಗಳಿಂದ ಹಬ್ಬಕ್ಕೆ ಬೇಕಾದ ವಸ್ತುಗಳನ್ನು ಖರೀದಿಸಲು ಲಕ್ಷ್ಮೇಶ್ವರದ ಪೇಟೆಗೆ ದೌಡಾಯಿಸಿದ್ದರಿಂದ 2-3 ದಿನಗಳಿಂದ ಮಾರುಕಟ್ಟೆಯಲ್ಲಿ ಜನಜಂಗುಳಿ ಹೆಚ್ಚಾಗಿತ್ತು. ವಿವಿಧ ವಸ್ತುಗಳನ್ನು ಖರೀದಿಸುವ ಕಾತರತೆಯಲ್ಲಿ ಜನರು ಪೇಟೆಯಲ್ಲಿ ಜಮಾಯಿಸಿದ್ದರು. ಬಟ್ಟೆ, ಗೃಹಪಯೋಗಿ ವಸ್ತುಗಳು, ಕಿರಾಣಿ ಅಂಗಡಿಗಳು ಜನರಿಂದ ತುಂಬಿಕೊಂಡಿದ್ದವು. ಪೇಟೆಯಲ್ಲಿ ಎಲ್ಲೆಂದರಲ್ಲಿ ಜನರ ದಂಡು ಕಂಡು ಬರುತ್ತಿತ್ತು. ದುಬಾರಿ ದುನಿಯಾದ ನಡುವೆಯೂ ಜನರು ಅಗತ್ಯ ವಸ್ತುಗಳನ್ನು ಕೊಳ್ಳುತ್ತಿದ್ದರು. ಅಲ್ಲದೆ ಹಣತೆಗಳನ್ನು ಕೊಳ್ಳಲು ಸಹ ಸಾಕಷ್ಟು ಮಹಿಳೆಯರು ಹಣತೆ ಮಾರಾಟ ಮಾಡುವವರ ಹತ್ತಿರ ಚೌಕಾಸಿ ಮಾಡಿ ದೇಶಿ ಮತ್ತು ವಿದೇಶಗಳಿಂದ ಆಮದು ಮಾಡಿಕೊಳ್ಳಲಾದ ಹಣತೆಗಳನ್ನು ಕೊಳ್ಳುತ್ತಿದ್ದರು.



**ತಪ್ಪಿದ ಟ್ರಾಫಿಕ್ ಕಿರಿಕಿರಿ**

ಪ್ರತಿವರ್ಷ ಹಬ್ಬಕ್ಕೆ ಪೇಟೆಯ ಅಕ್ಕಪಕ್ಕದಲ್ಲಿಯೇ ಕಬ್ಬು, ಬಾಳೆಕಂಬಗಳನ್ನು ಮಾರಾಟ ಮಾಡಲಾಗುತ್ತಿತ್ತು. ಇದರಿಂದಾಗಿ ಟ್ರಾಫಿಕ್ ಕಿರಿಕಿರಿ ಉಂಟಾಗುವುದರ ಜೊತೆಗೆ ಸಾಕಷ್ಟು ಕಸಕಡ್ಡಿ ಜನ ಓಡಾಡುವ ದಾರಿಯಲ್ಲಿ ಬೀಳುತ್ತಿತ್ತು. ಇದನ್ನು ತಪ್ಪಿಸುವ ನಿಟ್ಟಿನಲ್ಲಿ ಪುರಸಭೆ ಮತ್ತು ಪೊಲೀಸ್ ಇಲಾಖೆ ದಿಟ್ಟ ನಿರ್ಧಾರ ತೆಗೆದುಕೊಂಡು ಕಳೆದ 2 ವರ್ಷಗಳಿಂದ ಊರ ಹೊರಗಿನ ಇಟ್ಟಿಗೆರೆ ಕೆರೆ ದಂಡೆಯ ಮೇಲೆ ಕಬ್ಬು ಮತ್ತು ಬಾಳೆಕಂಬಗಳ ಮಾರಾಟದ ವ್ಯವಸ್ಥೆ ಮಾಡಿದ್ದರಿಂದ ಸಂಚಾರ ವ್ಯವಸ್ಥೆಗೆ ಯಾವುದೇ ತೊಡಕು ಉಂಟಾಗಲಿಲ್ಲ.

## ಉಸ್ತುವಾರಿ ಸಚಿವ ಡಾ.ಎಚ್.ಕೆ. ಪಾಟೀಲ ಅವರ ಜಿಲ್ಲಾ ಪ್ರವಾಸ


■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್. ಕೆ.ಪಾಟೀಲ ಅವರ ನವೆಂಬರ್ 1ರ ಗದಗ ಜಿಲ್ಲಾ ಪ್ರವಾಸದ ವಿವರ ಇಂತಿದೆ.

ನವೆಂಬರ್ 1 ರಂದು ಬೆಳಿಗ್ಗೆ 7.45 ಗಂಟೆಗೆ ನಗರದ ಮುನ್ಸಿಪಲ್ ಕಾಲೇಜು ಆವರಣದಲ್ಲಿ ಕನ್ನಡ ರಾಜ್ಯೋತ್ಸವ ನಿಮಿತ್ತ ಕನ್ನಡ ತಾಯಿ ಭುವನೇಶ್ವರಿ ಪುತ್ಥಳಿ ಮೆರವಣಿಗೆಗೆ ಚಾಲನೆ ನೀಡುವರು.

ಬೆಳಿಗ್ಗೆ 8.30 ಗಂಟೆಗೆ ಬೆಟಗೇರಿ ತೆಂಗಿನಕಾಯಿ ಬಜಾರ್ ನಲ್ಲಿ ಜರುಗುವ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ಬೆಳಿಗ್ಗೆ 9 ಗಂಟೆಗೆ ನಗರದ ಶ್ರೀ ಕೆ ಎಚ್ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ



ಏರ್ಪಡಿಸಿದ ಕನ್ನಡ ರಾಜ್ಯೋತ್ಸವ ದಿನಾಚರಣೆ ನಿಮಿತ್ತ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ಮಧ್ಯಾಹ್ನ 12 ಗಂಟೆಗೆ ಜಿಲ್ಲಾಡಳಿತ ಭವನದ ಆವರಣದಲ್ಲಿ ಹಲ್ಮಿಡಿ ಶಾಸನದ ಪ್ರತಿಕೃತಿ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು ಎಂದು ಸಚಿವರ ಕಾರ್ಯಾಲಯ ಜಿಲ್ಲಾಡಳಿತದಿಂದ ಪ್ರಕಟಣೆ ತಿಳಿಸಿದೆ.

## ರಾಜ್ಯ ದಿವಾಳಿ ಆಗಿರುವುದನ್ನು ಕಾಂಗ್ರೆಸ್ ನಾಯಕರೇ ಒಪ್ಪಿದ್ದಾರೆ: ಜೋಶಿ ಲೇವಡಿ!

■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ರಾಜ್ಯ ದಿವಾಳಿ ಆಗಿರುವುದನ್ನು ಕಾಂಗ್ರೆಸ್ ನಾಯಕರೇ ಒಪ್ಪಿದ್ದಾರೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಲೇವಡಿ ಮಾಡಿದ್ದಾರೆ.


ಈ ಕುರಿತು ಮಾತನಾಡಿದ ಅವರು, ಶಕ್ತಿ ಯೋಜನೆ ನಿಲ್ಲಿಸುವ ಬಗ್ಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಸುಳಿವು ನೀಡಿದ್ದಾಯಿತು. ಈಗ ಖುದ್ದು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರೇ ರಾಜ್ಯ ದಿವಾಳಿ ಆಗಿರುವುದನ್ನು ಒಪ್ಪಿಕೊಂಡಿದ್ದಾರೆ. ಅಂತೂ ಕಾಂಗ್ರೆಸ್ ನಾಯಕರಿಗೆ ತಡವಾಗಿ ಆದರೂ ಜ್ಞಾನೋದಯ ಆಗುತ್ತಿದೆ ಎಂದು ಪ್ರಲ್ಹಾದ್ ಜೋಶಿ ಟೀಕಿಸಿದ್ದಾರೆ.

## ಜಿಲ್ಲಾ ಮಟ್ಟದ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ









■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಟ್ಟಣದ ವೈದ್ಯಕೀಯ ಕ್ಷೇತ್ರದಲ್ಲಿ ಸೇವೆಗಾಗಿ ಖ್ಯಾತ ವೈದ್ಯ ಡಾ.ಎಸ್.ಸಿ. ಚವಡಿ, ಪತ್ರಿಕಾರಂಗದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಹಿರಿಯ ಪತ್ರಕರ್ತ, ವಿಜಯವಾಣಿ ವರದಿಗಾರ ವಿ.ಡಿ. ಕಣವಿ, ಶಾಲೆಯ ಉತ್ತಮ ಕಾರ್ಯನಿರ್ವಹಣಾ ಸೇವೆಗಾಗಿ ಸರಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆಯ ಪ್ರಧಾನ ಗುರು ಪಿ.ಬಿ. ಕೆಂಚನಗೌಡರ, ಸಾಮಾಜಿಕ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆಗಾಗಿ ವಿರೇಂದ್ರ ಹೂಲಿ ಇವರನ್ನು ಕರ್ನಾಟಕ ರಾಜ್ಯೋತ್ಸವದ ನಿಮಿತ್ತ ಗದಗ ಜಿಲ್ಲಾ ಮಟ್ಟದ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು, ನ.1ರಂದು ಕೆ.ಎಚ್. ಪಾಟೀಲ ಜಿಲ್ಲಾ ಕ್ರೀಡಾಗಂಣದಲ್ಲಿ ಜರುಗಲಿರುವ ಕಾರ್ಯಮ್ರಮದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.







ನಾಡಿನ ಸಮಸ್ತ ಜನತೆಗೆ
ಕನ್ನಡ ರಾಜ್ಯೋತ್ಸವದ ಹಾಗೂ
ದೀಪಾವಳಿಯ ಹಾರ್ದಿಕ ಶುಭಾಶಯಗಳು
ಇದು ಬೆಳಕಿನ ಹಬ್ಬ, ನೀವು ದೀಪವನ್ನು ಬೆಳಗಿಸಿ.
ಎಲ್ಲಾ ದುಃಖ ಮತ್ತು ನೋವುಗಳನ್ನು ಮರೆತು,
ಎಲ್ಲರನ್ನು ಅಪ್ಪಿಕೊಳ್ಳಿ, ಈ ದೀಪಾವಳಿಯನ್ನು
ಸಂತೋಷದಿಂದ ಆಚರಿಸಿ.
ಶುಭ ಕೋರುವವರು
ಅಕ್ಬರಸಾಬ ಬಬರ್ಚಿ
ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ, ಗದಗ



Happy Diwali
FESTIVAL OF LIGHT
ಬೆಳಕಿನ ಹಬ್ಬ ದೀಪಾವಳಿ ಜೀವನದ ಸಂತೋಷಗಳನ್ನು ಮತ್ತು
ಸಂಬಂಧಗಳನ್ನು ಆನಂದಿಸುವ ಸಮಯವಾಗಿದೆ.
ನಾಡಿನ ಸಮಸ್ತ ಜನತೆಗೆ
ಕನ್ನಡ ರಾಜ್ಯೋತ್ಸವದ ಹಾಗೂ ದೀಪಾವಳಿಯ
ಹಾರ್ದಿಕ ಶುಭಾಶಯಗಳು
ಸಪ್ನಾ ಬಾರ್ & ರೆಸ್ಟೋರೆಂಟ್, ಗದಗ


ಮನಸ್ಸಿನಲ್ಲಿರುವ ಅಂಧಕಾರ ಮತ್ತು
ಅಜ್ಞಾನವನ್ನು ಹೋಗಲಾಡಿಸಿ
ಒಳಿತನ್ನು ತುಂಬುವುದೇ ದೀಪಾವಳಿ.
ನಾಡಿನ ಸಮಸ್ತ ಜನತೆಗೆ
ಕನ್ನಡ ರಾಜ್ಯೋತ್ಸವದ ಹಾಗೂ
ದೀಪಾವಳಿಯ ಹಾರ್ದಿಕ ಶುಭಾಶಯಗಳು
ಹೇಮಗಿರೀಶ ಹಾವಿನಾಳ
ಅಧ್ಯಕ್ಷರು, ಬಿಜೆಪಿ ಮುಂಡರಗಿ ಮಂಡಲ
ಮಾಜಿ ಸದಸ್ಯರು, ಜಿಲ್ಲಾ ಪಂಚಾಯತ, ಗದಗ


ಬೆಳಕಿನ ಹಬ್ಬ ದೀಪಾವಳಿ
ಸಂತೋಷ ಮತ್ತು ಸಕಾರಾತ್ಮಕತೆಯನ್ನು
ತರುತ್ತದೆ. ಈ ಮಂಗಳಕರ
ದಿನದಂದು ದೇವಿಯು ನಿಮಗೆ ಬೇಕಾದ
ಎಲ್ಲವನ್ನೂ ಧಾರೆಯೆರೆಯಲಿ.
ನಾಡಿನ ಸಮಸ್ತ ಜನತೆಗೆ
ಕನ್ನಡ ರಾಜ್ಯೋತ್ಸವದ ಹಾಗೂ ದೀಪಾವಳಿಯ
ಹಾರ್ದಿಕ ಶುಭಾಶಯಗಳು
ವೆಂಕನಗೌಡ ಗೋವಿಂದಗೌಡ್ರ
ರಾಜ್ಯ ವಕ್ತಾರರು, ಜಾತ್ಯತೀತ ಜನತಾದಳ, ಬೆಂಗಳೂರು
ಸಾ|| ಗದಗ


ದೀಪಾವಳಿ ಹಬ್ಬ ಬೆಳಕು
ಕತ್ತಲೆಯ ಮೇಲೆ ಜಯಗಳಿಸುತ್ತದೆ
ಎಂಬುದನ್ನು ನೆನಪಿಸುತ್ತದೆ.
ನಾಡಿನ ಸಮಸ್ತ ಜನತೆಗೆ
ಕನ್ನಡ ರಾಜ್ಯೋತ್ಸವದ ಹಾಗೂ ದೀಪಾವಳಿಯ
ಹಾರ್ದಿಕ ಶುಭಾಶಯಗಳು
ಶುಭ ಕೋರುವವರು
ರವಿ ಕಮತರ
ಸದಸ್ಯರು, ವಾರ್ಡ್ ನಂ. 22,
ನಗರಸಭೆ ಗದಗ-ಬೆಟಗೇರಿ


ನಿಮ್ಮ ಸುತ್ತಲೂ ಸಂತೋಷ ಮತ್ತು
ಪ್ರೀತಿಯನ್ನು ಹರಡುವ ಮೂಲಕ
ಬೆಳಕಿನ ಹಬ್ಬವನ್ನು ಆಚರಿಸಿ.
ನಾಡಿನ ಸಮಸ್ತ ಜನತೆಗೆ
ಕನ್ನಡ ರಾಜ್ಯೋತ್ಸವದ ಹಾಗೂ
ದೀಪಾವಳಿಯ ಹಾರ್ದಿಕ ಶುಭಾಶಯಗಳು
ಶುಭ ಕೋರುವವರು
ಫಾರುಕ ಕಟ್ಟಿಮನಿ
ಕರ್ನಾಟಕ ಪ್ರಜಾಶಕ್ತಿ ಸಮಿತಿ
ಜಿಲ್ಲಾ ಅಧ್ಯಕ್ಷರು ಆಟೋ ಚಾಲಕರ
ಮತ್ತು ಮಾಲಕರ ಘಟಕ ಗದಗ
ಡಾ|| ದಾದಾಪೀರ ಬಿ. ಕಲೇಗಾರ
ಜಿಲ್ಲಾ ಅಧ್ಯಕ್ಷರು,
ಕರ್ನಾಟಕ ಪ್ರಜಾಶಕ್ತಿ ಸಮಿತಿ ಗದಗ
ಹಾಗೂ ಕರುನಾಡು ಚೇತನ ಪ್ರಶಸ್ತಿ ಪುರಸ್ಕೃತರು
ಆರೀಫ ಮುಳಗುಂದ
ಕರ್ನಾಟಕ ಪ್ರಜಾಶಕ್ತಿ ಸಮಿತಿ
ಜಿಲ್ಲಾ ಕಾರ್ಯದರ್ಶಿ ಆಟೋ ಚಾಲಕರ
ಮತ್ತು ಮಾಲಕರ ಘಟಕ ಗದಗ


ದೀಪಾವಳಿ ಹಬ್ಬ ಒಟ್ಟಿಗೆ ಸೇರುವ, ಪ್ರೀತಿಯನ್ನು ಆಚರಿಸುವ
ಮತ್ತು ಸುಂದರವಾದ ನೆನಪುಗಳನ್ನು
ಸೃಷ್ಟಿಸುವ ಸಮಯ.
ನಾಡಿನ ಸಮಸ್ತ ಜನತೆಗೆ
ಕನ್ನಡ ರಾಜ್ಯೋತ್ಸವದ
ಹಾಗೂ ದೀಪಾವಳಿಯ
ಹಾರ್ದಿಕ ಶುಭಾಶಯಗಳು
ಬಿ. ಎಮ್. ನದ್ದಿಮುಲ್ಲಾ
ರಾಜ್ಯಾಧ್ಯಕ್ಷರು,
ದಿ ನ್ಯಾಶನಲ್ ರಾಜೀವ್‌ಗಾಂಧಿ ಬ್ರಿಗೇಡ್ ಕಾಂಗ್ರೆಸ್, ಕರ್ನಾಟಕ


.ದೀಪಾವಳಿಯ ದಿವ್ಯ ಬೆಳಕು
ನಿಮ್ಮ ಜೀವನದಲ್ಲಿ ಶಾಂತಿ, ಸಮೃದ್ಧಿ,
ಸಂತೋಷ ಮತ್ತು ಉತ್ತಮ
ಆರೋಗ್ಯವನ್ನು ಹರಡಲಿ.
ನಾಡಿನ ಸಮಸ್ತ ಜನತೆಗೆ
ಕನ್ನಡ ರಾಜ್ಯೋತ್ಸವದ ಹಾಗೂ
ದೀಪಾವಳಿಯ ಹಾರ್ದಿಕ ಶುಭಾಶಯಗಳು
ಶುಭ ಕೋರುವವರು :
ಕೆ. ಎಂ. ಸಯ್ಯದ್
ಅಧ್ಯಕ್ಷರು, ಕೆ.ಎಂ.ಎಸ್. ಸಮೂಹ ಸಂಸ್ಥೆ ಹಾಗೂ
ರಾಜ್ಯ ಕಾಂಗ್ರೆಸ್ ಕೋ-ಆರ್ಡಿನೇಟರ್, ಕೊಪ್ಪಳ

**ಜಿಲ್ಲಾ ಕ್ರೀಡಾಂಗಣದಲ್ಲಿ ಸಚಿವ ಎಚ್.ಕೆ. ಪಾಟೀಲರಿಂದ ಸಾರ್ವಜನಿಕ ಧ್ವಜಾರೋಹಣ**

# ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಗಳು

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತದಿಂದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ನವೆಂಬರ್ 1ರಂದು ಬೆಳಿಗ್ಗೆ 9 ಗಂಟೆಗೆ ನಗರದ ಕೆ.ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಸಾರ್ವಜನಿಕ ಧ್ವಜಾರೋಹಣ ಕಾರ್ಯಕ್ರಮ ಜರುಗಲಿದೆ.


ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ. ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ. ಪಾಟೀಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಧ್ವಜಾರೋಹಣ ನೆರವೇರಿಸುವರು.

ಮುಖ್ಯ ಅತಿಥಿಗಳಾಗಿ ಮಾಜಿ ಮುಖ್ಯಮಂತ್ರಿ ಹಾಗೂ ಸಂಸದರಾದ ಬಸವರಾಜ ಬೊಮ್ಮಾಯಿ, ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನಪರಿಷತ್ ಸದಸ್ಯರಾದ ಸಲೀಂ ಅಹ್ಮದ್, ಕರ್ನಾಟಕ ಖನಿಜ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ರೋಣ ಶಾಸಕರಾದ ಜಿ.ಎಸ್. ಪಾಟೀಲ, ಸಂಸದರಾದ ಪಿ.ಸಿ. ಗದ್ದಿಗೌಡರ, ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ, ನರಗುಂದ ಶಾಸಕ ಸಿ.ಸಿ. ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ. ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಜಿ ಅವರುಗಳು ಆಗಮಿಸುವರು.

ಆಹಾರ, ನಾಗರಿಕ ಮತ್ತು ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರಮಣದೀಪ್ ಚೌಧರಿ, ಜಿಲ್ಲಾಧಿಕಾರಿ ಗೋವಿಂದರೆಡ್ಡಿ, ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭರತ್ ಎಸ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ ಸರ್ವರಿಗೂ ಸ್ವಾಗತ ಕೋರಿದ್ದಾರೆ.

## ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮಗಳು

ನವೆಂಬರ್ 1ರಂದು ಬೆಳಿಗ್ಗೆ 9 ಗಂಟೆಗೆ ನಗರದ ಕೆ.ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ. ಪಾಟೀಲ ಅವರಿಂದ ಧ್ವಜಾರೋಹಣ ಕಾರ್ಯಕ್ರಮ ಜರುಗಲಿದೆ. ನಂತರ ರಾಷ್ಟ್ರಗೀತೆ, ನಾಡಗೀತೆ, ಪರೇಡ್ ವೀಕ್ಷಣೆ, ಪಥ ಸಂಚಲನ ಮತ್ತು ವಂದನೆ ಸ್ವೀಕಾರ, ರಾಜ್ಯೋತ್ಸವದ ಸಂದೇಶ, ಸಾಂಸ್ಕೃತಿಕ ಕಾರ್ಯಕ್ರಮಗಳು, ಸಾಧಕರಿಗೆ ಸನ್ಮಾನ ಕಾರ್ಯಕ್ರಮಗಳು ಜರುಗಲಿವೆ.




ಪುರಾತನ ಪ್ರಸಿದ್ಧ ಬೆಟಗೇರಿ ಗದಗ ನಗರದ ಶ್ರೀ ಹಳೇ ಬನಶಂಕರಿ ದೇವಸ್ಥಾನದಲ್ಲಿ ದೇವಾಂಗ ಜನಾಂಗದ ಕುಲದೇವತೆ ಬನಶಂಕರಿ ದೇವಿಗೆ ನರಕ ಚತುರ್ದಶಿ ಅಂಗವಾಗಿ ಹೂವಿನಿಂದ ಅಲಂಕರಿಸಲಾಗಿತ್ತು. ಈ ಸೇವೆಯನ್ನು ವಾಣಿ ಪ್ರಫುಲ್ ಮಾಳೆಕೊಪ್ಪಮಠ ಕುಟುಂಬದವರು ವಹಿಸಿದ್ದರು. ಸಮಾಜ ಬಾಂಧವರು ಹಾಗೂ ಭಕ್ತಾದಿಗಳು ಶ್ರೀ ದೇವಿಯ ದರ್ಶನ ಪಡೆದ ಪುನೀತರಾದರು.

## ಪ್ರೀತಿಯ ಜ್ಯೋತಿ ಬೆಳಗೋಣ



ಎರಡು ಅಕ್ಷರದ ಈ ಪ್ರೀತಿ
ಆರಂಭವಾಗುವುದು ನಾನಾ ರೀತಿ
ಹಗಲು ಇರುಳು ಬರೀ ಭ್ರಾಂತಿ
ಎರಡು ಹೃದಯಗಳ ಸಂಕ್ರಾಂತಿ (1)

ತುಂಟಾಟದ ಸೋದರ ಮಾವನಂತೆ
ಭಾವನೆಗಳಿಗೆ ಸ್ಪಂದಿಸುವ ಕೃಷ್ಣನಂತೆ
ಜೈಯಂಕರಿಸುವ ಶ್ರೀರಾಮನಂತೆ
ಬಾಳು ಬೆಳಗುವ ಚಂದ್ರನ ಬೆಳಕಿನಂತೆ (2)

ಏಳು ಜನುಮದ ಋಣಾನುಬಂಧನೆ
ಮನದಲ್ಲಿ ಕೋಟಿ ಕನಸುಗಳ ಕಲ್ಪನೆ
ಶೀವ ಪಾರ್ವತಿಯರಿಗೂ ನಮ್ಮ ವಂದನೆ
ಬದುಕಿನುದ್ದಕ್ಕೂ ಈ ಪ್ರೀತಿ ಆರಾಧನೆ (3)

ಯುಗ ಯುಗಾಂತರಗಳಿಂದ ಪ್ರಜ್ವಲಿಸುವ ಪ್ರೀತಿ ಶಾಶ್ವತ
ಪ್ರೀತಿ ಪ್ರೇಮ ಪ್ರಣಯ ಪ್ರಸಂಗದ ಬೆಸುಗೆಯ ರಾಧಾಂತ
ಪ್ರೀತಿಯ ಜ್ಯೋತಿ ವಿಶ್ವಕ್ಕೆ ವಿಶ್ವಪಥ
ಮನ ಮನೆಯಲ್ಲಿ ಬೆಳಗಲಿ ಜ್ಞಾನ ದೀವಿಗೆ
ಸದಾ ಕಾಲ ಪರಿಮಳ ಬೀರುತ್ತಾ (4)

**– ಸುವರ್ಣ ಮಾಳಗಿಮನಿ (ಬಸುಮಾ)**
ಶಾಬಜಾರ, ಬಂಕಾಪುರ.

**69ನೇ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಲೇಖನ**

# ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ

'ಕನ್ನಡ ಕನ್ನಡ ಬರ್ರಿ ನಮ್ಮ ಸಂಗಡ
ಎಲ್ಲೆಲ್ಲೂ ಉಸಿರಬೇಕು
ನಮ್ಮ ನುಡಿ ಕನ್ನಡ
ಸಿರಿನಾಡನು ಕಟ್ಟಲಿಕ್ಕೆ
ಬರ್ರಿ ನಮ್ಮ ಸಂಗಡ.'

ಕನ್ನಡದ ಖ್ಯಾತ ಕವಿಗಳಾದ ಚಂದ್ರಶೇಖರ ಪಾಟೀಲರು ರಚಿಸಿದ ಈ ಕವನ ಕೇಳಿದಾಗ ನೆನಪಾಗುವುದೇ ಕನ್ನಡ ಭಾಷೆ, ಸಾಹಿತ್ಯ, ನೆಲ, ಜಲ. ಇಂತಹ ಸುಂದರ ಕರುನಾಡಿಗೆ 69ರ ಸಂಭ್ರಮ.

ಕರ್ನಾಟಕ ನಮ್ಮ ಹೆಮ್ಮೆಯ ನಾಡು, ಶ್ರೀಗಂಧದ ಬೀಡು, ಹಲವು ಕವಿಗಳ ನಾಡು, ಸಾಧು-ಸಂತರು, ಶಿವಶರಣರು ನಡೆದಾಡಿದ ಬೀಡು. ಹಚ್ಚಹಸುರಿನ ಸುಂದರ ಸೊಬಗಿನ ನಾಡು ನಮ್ಮ ಕನ್ನಡದ ನಾಡು. ಕನ್ನಡ ಭಾಷೆ ನಮ್ಮ ಮಾತೃಭಾಷೆ. ಕನ್ನಡ ತಾಯಿಯ ಮಕ್ಕಳಾದ ನಾವು ನವೆಂಬರ್ 1ರಂದು ಕನ್ನಡ ರಾಜ್ಯೋತ್ಸವ ಆಚರಿಸುತ್ತೇವೆ. ಇಷ್ಟೇ ಅಲ್ಲದೇ ಕನ್ನಡದ ಭಾಷಾಭಿಮಾನವನ್ನು ಮೆರೆಸುವುದಕ್ಕಾಗಿ ಈ ಶುಭ ದಿನದಲ್ಲಿ ಶಾಲಾ ಕಾಲೇಜುಗಳಲ್ಲಿ, ಸಮುದಾಯಗಳಲ್ಲಿ, ಕಚೇರಿ, ಸಂಘ-ಸಂಸ್ಥೆಗಳಲ್ಲಿ ಹಾಗೂ ಕನ್ನಡಪರ ಸಂಘಟನೆಗಳಿಂದ ಕನ್ನಡ ರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಗುತ್ತದೆ.

ಈ ವರ್ಷ 69ನೇ ಕನ್ನಡ ರಾಜ್ಯೋತ್ಸವವನ್ನು ಕನ್ನಡ ಸಂಘಟನೆಗಳು, ಕನ್ನಡಾಭಿಮಾನಿಗಳು ನಾಡಿನಾದ್ಯಂತ ಒಂದು ತಿಂಗಳ ಕಾಲ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಬಹಳ ವಿಭಿನ್ನ, ವಿಶಿಷ್ಟವಾಗಿ ಕರ್ನಾಟಕದ ಮೂಲೆ ಮೂಲೆಯಲ್ಲೂ ಅತ್ಯಂತ ವಿಜ್ರಂಭಣೆಯಿಂದ ಆಚರಿಸಲಾಗುತ್ತದೆ.

ಕರ್ನಾಟಕವು ಆರಂಭದಲ್ಲಿ ಮೈಸೂರು ರಾಜ್ಯವಾಗಿತ್ತು. (ಪ್ರಾಂತ್ಯ) 1950ರಲ್ಲಿ ಭಾರತ ದೇಶವು ಗಣರಾಜ್ಯವಾದ ಮೇಲೆ ವಿವಿಧ ಪ್ರಾಂತ್ಯಗಳು, ವಿವಿಧ ಭಾಷೆಗಳನ್ನು ಮಾತನಾಡುವ ಭಾಷಾವಾರು ಪ್ರಾಂತ್ಯಗಳ ಆಧಾರದ ಮೇಲೆ ರಾಜ್ಯಗಳು ರಚನೆಗೊಂಡವು. ಆ ಸಮಯದಲ್ಲಿ ಕನ್ನಡವನ್ನು ಮಾತನಾಡುವ ಜನರ ಪ್ರಾಂತ್ಯವನ್ನು ಮೈಸೂರು ರಾಜ್ಯವಾಗಿ 1956ರ ನವೆಂಬರ್ 1ರಂದು ಉದಯವಾಯಿತು. ಮೈಸೂರು ಸಂಸ್ಥಾನಕ್ಕೆ ಮುಂಬಯಿ ಕರ್ನಾಟಕ, ಹೈದರಾಬಾದ್ ಕರ್ನಾಟಕ ಹಾಗೂ ಮದ್ರಾಸ್ ಕರ್ನಾಟಕ, ಕೊಡಗು ಪ್ರಾಂತ್ಯ



ಹೀಗೆ ನಾಲ್ಕು ವಿಭಾಗವಾಗಿ ಹಂಚಿಹೋಗಿದ್ದ ಅಂದಿನ ಪ್ರಾಂತ್ಯಗಳು ನವೆಂಬರ್ 1ರಂದು ಅಧಿಕೃತವಾಗಿ ಒಗ್ಗೂಡಿದವು. ಕನ್ನಡ ಭಾಷೆ ಮಾತನಾಡುವ ಎಲ್ಲಾ ಜನರಿರುವ ಪ್ರಾಂತ್ಯವನ್ನು ಒಗ್ಗೂಡಿಸಿ ಮೈಸೂರು ರಾಜ್ಯವನ್ನಾಗಿ ಮಾಡಿದ ಸುದಿನವಿದು.

ಕನ್ನಡದ ಕುಲಪುರೋಹಿತ ಎಂದೇ ಕರೆಸಿಕೊಳ್ಳುವ ಗದಗ ಜಿಲ್ಲೆ ರೋಣ ತಾಲೂಕಿನ ಹೊಳೆಆಲೂರಿನ ಆಲೂರು ವೆಂಕಟರಾವ್ ಅವರು 1905ರಲ್ಲಿ ಕರ್ನಾಟಕ ಏಕೀಕರಣ ಚಳವಳಿಯ ಕನಸು ಕಂಡ ಮೊದಲು ವ್ಯಕ್ತಿ. ಇವರೇ ಕರ್ನಾಟಕ ಏಕೀಕರಣ ಚಳುವಳಿ ಪ್ರಾರಂಭಿಸುತ್ತಾರೆ. ಇವರ ಜೊತೆಯಲ್ಲಿ ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕೆ.ಶಿವರಾಮ ಕಾರಂತ, ಎ.ಎನ್. ಕೃಷ್ಣರಾವ್, ಬಿ.ಎಂ. ಶ್ರೀಕಂಠಯ್ಯ, ಜಕ್ಕಲಿ ಗ್ರಾಮದ ಅಂದಾನಪ್ಪ ದೊಡ್ಡಮೇಟಿ ಹಾಗೂ ಇನ್ನಿತರ ಕನ್ನಡಪರ ನಾಯಕರುಗಳ ಪರಿಶ್ರಮದಿಂದ ನಮ್ಮ ಚೆಲುವ ಕನ್ನಡ ನಾಡು ಉದಯವಾಯಿತು.

ಈ ಹಿನ್ನೆಲೆಯಲ್ಲಿ ಅಂದಿನಿಂದ ಪ್ರತಿ ವರ್ಷ ನವೆಂಬರ್ 1ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಕನ್ನಡ ಚಳವಳಿ ಹೋರಾಟಗಾರರಾದ ಎಂ. ರಾಮಮೂರ್ತಿ ಅವರು ಮೊದಲ ಬಾರಿಗೆ ಕೆಂಪು-ಹಳದಿ ಬಣ್ಣದ ಕನ್ನಡ ಬಾವುಟ ತಯಾರಿಸಿದ್ದರು. ಅದು ಕರ್ನಾಟಕದ ಬಾವುಟವಾಗಿ ಇಂದಿಗೂ ರಾಜಾಜಿಸುತ್ತಿದೆ.

ಹೀಗೆ ಹಲವು ವರ್ಷಗಳ ಕಾಲ ಮೈಸೂರು ರಾಜ್ಯವಾಗಿದ್ದು, 1973 ನವೆಂಬರ್ 1ರಂದು ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ಮರು ನಾಮಕರಣ ಮಾಡಲಾಗುತ್ತದೆ. ಈ ಸಂದರ್ಭದಲ್ಲಿ ದೇವರಾಜ ಅರಸರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದರು.

ಕನ್ನಡ ನಾಡು ಕಪ್ಪು ಮಣ್ಣಿನ ನಾಡು. ಕರು+ನಾಡು= ಕರುನಾಡು ಅಥವಾ ಕರ್ನಾಟಕ ಉದಯವಾದ ಈ ದಿನವನ್ನು ಸಂಭ್ರಮಿಸುವ ಹಾಗೂ ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿದ ಮಹಾನ್ ನಾಯಕರನ್ನು ಸ್ಮರಿಸಿ, ಗೌರವಿಸುವದು ಹಾಗೂ ಕನ್ನಡಾಭಿಮಾನವನ್ನು ಮರೆಸುವ ಉದ್ದೇಶದಿಂದ ಪ್ರತಿವರ್ಷ ಕನ್ನಡ ರಾಜ್ಯೋತ್ಸವ ಆಚರಿಸಲಾಗುತ್ತದೆ.

ಈ ದಿನ ಶಾಲಾ ಕಾಲೇಜುಗಳಲ್ಲಿ ಕನ್ನಡಾಂಬೆಯ ಫೋಟೊ ಇಟ್ಟು ಪೂಜೆ ಸಲ್ಲಿಸಲಾಗುತ್ತದೆ. ಜೊತೆಗೆ ಕನ್ನಡ ನಾಡಿನ ಭಾಷೆ, ಸಂಸ್ಕೃತಿ, ಕಲೆಗಳನ್ನು ಉಳಿಸುವ-ಬೆಳೆಸುವ ಉದ್ದೇಶದಿಂದ ಕನ್ನಡ ನಾಡಿಗೆ ಸಂಬಂಧಿಸಿದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಇದರ ಜೊತೆಯಲ್ಲಿ ಕನ್ನಡದ ಬಾವುಟವನ್ನು ಹಿಡಿದು ಬೀದಿ ಬೀದಿಗಳಲ್ಲಿ ಶಾಲಾ-ಕಾಲೇಜು ಮಕ್ಕಳು, ಕನ್ನಡಾಭಿಮಾನಿಗಳು ಮೆರವಣಿಗೆಗಳನ್ನು ಮಾಡುವ ಮೂಲಕ ಕನ್ನಡಾಭಿಮಾನ ಮೆರೆಯುತ್ತಾರೆ. ಈ ದಿನ ನಾಡಿನೆಲ್ಲೆಡೆ ಪ್ರತಿಯೊಂದು ರಸ್ತೆಯುದ್ದಕ್ಕೂ ಕೆಂಪು-ಹಳದಿ ಬಣ್ಣದ ಬಾವುಟ ರಾರಾಜಿಸುತ್ತದೆ.

ವೀರಾಗಸಿ, ಡೊಳ್ಳು ಕುಣಿತ, ಕೋಲಾಟ ಹೀಗೆ ನಮ್ಮ ಸಂಸ್ಕೃತಿಯನ್ನು ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ, ಹುಯಿಲಗೊಳ ನಾರಾಯಣರಾವ್ ರಚಿಸಿದ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಹಾಗೂ ಕನ್ನಡ ಪ್ರಸಿದ್ಧ ಕವಿಗಳ ಕನ್ನಡ ಗೀತೆಗಳನ್ನು ಹಾಗೂ ಕುವೆಂಪುರವರು ರಚಿಸಿದ ನಾಡಗೀತೆಯನ್ನು ಹಾಡುವ ಮೂಲಕ ಕನ್ನಡಾಂಬೆಗೆ ವಂದನೆ ಹೇಳಲಾಗುತ್ತದೆ.

ಬೆಂಗಳೂರು, ಮಂಗಳೂರಿನಂತಹ ಮಹಾ ನಗರಗಳಲ್ಲಿ ಕನ್ನಡ ಭಾಷೆ ಮಾತನಾಡುವುದು ಕಡಿಮೆಯಾಗುತ್ತಿದೆ. ಇದಕ್ಕೆ ಕಾರಣ ಅನ್ಯ ಭಾಷಿಕರ ಆಗಮನ. ಕರ್ನಾಟಕಕ್ಕೆ ಆಗಮಿಸುವ ಅನ್ಯಭಾಷಿಗರಿಗೆ ಕನ್ನಡವನ್ನು ಕಲಿಸಬೇಕು, ಕಲಿಯಲು ಪ್ರೋತ್ಸಾಹ ನೀಡಬೇಕು, ಕನ್ನಡ ಭಾಷೆ ಬೆಳೆಸಿ ನಾವು ಹೆಚ್ಚು ಬಳಕೆ ಮಾಡುವ ಮೂಲಕ ಕನ್ನಡ ಭಾಷೆಯ ಶ್ರೀಮಂತಿಕೆಯನ್ನು ಎತ್ತಿಹಿಡಿಯಬೇಕು. ನಾವು ಕೇವಲ ನವೆಂಬರ್ 1ರ ಕನ್ನಡಿಗರಾಗದೇ, 'ಕನ್ನಡ ನಾಡಿನ ಒಬ್ಬ ಜವಾಬ್ದಾರಿಯುತ ಪ್ರಜೆಯಾಗಿ ಕನ್ನಡದಲ್ಲೇ ಮಾತನಾಡುತ್ತೇನೆ, ಕನ್ನಡದಲ್ಲೆ ಬರೆಯುತ್ತೇನೆ, ನಿತ್ಯ ವ್ಯವಹಾರ ಕನ್ನಡದಲ್ಲೇ ಮಾಡುತ್ತೇನೆ. ಕನ್ನಡ ಸಾಹಿತ್ಯವನ್ನು ಉಳಿಸುತ್ತೇನೆ-ಬೆಳಸುತ್ತೇನೆ, ಕನ್ನಡೇತರರಿಗೆ ಕನ್ನಡ ಸಾಹಿತ್ಯ ಕಲಿಸುತ್ತೇನೆ, ಕನ್ನಡ ನಾಡು ನುಡಿ, ಸಂಸ್ಕೃತಿ, ಪರಂಪರೆ ಉಳಿಸಲು ಸದಾ ಟೊಂಕ ಕಟ್ಟಿ ನಿಲ್ಲುತ್ತೇನೆ' ಎಂದು ಇದೇ ಸಂದರ್ಭದಲ್ಲಿ ದೃಢ ನಿರ್ಧಾರ ಮಾಡಿದಾಗ ಕನ್ನಡ ರಾಜ್ಯೋತ್ಸವ ಆಚರಣೆ ಮಾಡಿದ್ದಕ್ಕೂ ಸಾರ್ಥಕವಾದಂತೆ ಆಗುತ್ತದೆ.



ನಾವು ನೀವೆಲ್ಲರೂ ಸೇರಿ ಕನ್ನಡ ಉಳಿಸೋಣ, ಕನ್ನಡ ಬೆಳೆಸೋಣ, ಕನ್ನಡ ಸಾಹಿತ್ಯವನ್ನು ಓದುವುದರೊಂದಿಗೆ ಪ್ರೋತ್ಸಾಹ ನೀಡೋಣ. ಎಲ್ಲರಿಗೂ ಕನ್ನಡ ರಾಜ್ಯೋತ್ಸವ ಶುಭಾಶಯಗಳು.

– ಎಸ್.ಕೆ. ಆಡಿನ, ಹೊಳೆಆಲೂರ.

**ಚೆಲುವ ಕನ್ನಡ ನಾಡು ಉದಯವಾದ ದಿನವಿಂದು**

# 'ಕರ್ನಾಟಕ ಏಕೀಕರಣ' ನಡೆದು ಬಂದ ಹಾದಿ

ಆತ್ಮೀಯ ಕನ್ನಡಿಗರೇ, 'ಕರ್ನಾಟಕ' ಎಂಬ ಒಂದು ಶಬ್ದದಲ್ಲಿ ಎಂಥಹ ಅದ್ಭುತವಾದ ಮಾಂತ್ರಿಕ ಶಕ್ತಿ ತುಂಬಿದೆ ಎಂಬುದನ್ನು ತಿಳಿಯೋಣ. ಕರ್ನಾಟಕದ ಅನೇಕ ಅರಸರು ಆಳಿ ಹೋದರು, ಕವಿಗಳು ಹೋದರು, ಸಂಪತ್ತು ಹೋಯಿತು, ವೈಭವವೂ ಹೋಯಿತು, ಆದರೆ 'ಕರ್ನಾಟಕ' ಎಂಬ ಶಬ್ದ ಮಾತ್ರ ಅಚ್ಚಳಿಯದೇ ಉಳಿದಿದೆ. ಅದು ದ್ರೌಪದಿಯ ಅಕ್ಷಯ ಪಾತ್ರೆಯ ಅಗುಳಿನಂತಿರುತ್ತದೆ. ಶ್ರೀ ಕೃಷ್ಣ ಪರಮಾತ್ಮನ ಕೃಪೆಯಿಂದ ನಾವು ಇದೊಂದು ಅಗುಳಿನಿಂದ ಸಾವಿರಾರು ಜನರ ಹಸಿವೆಯನ್ನು ಇಂಗಿಸಬಹುದು. ನಮ್ಮ ಕನ್ನಡ ಭಾಷೆಯು ಸುಮಾರು 2 ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿದೆ. ಕನ್ನಡ ನಾಡು-ನುಡಿ, ವೇಷ-ಭಾಷೆ, ಸಂಸ್ಕೃತಿ-ಸಂಸ್ಕಾರ ವೈಶಿಷ್ಟತೆಯ ನೆಲೆಬೀಡಾಗಿದೆ. ಕವಿ ಮಹಲಿಂಗರಂಗರು ಕನ್ನಡ ಭಾಷೆಯ ಸೊಬಗು, ಭಾಷೆಯ ವಿಶೇಷತೆ, ಸರಳತೆಯನ್ನು ತುಂಬಾ ಅಚ್ಚುಕಟ್ಟಾಗಿ ವಿವರಿಸಿದ್ದಾರೆ.

'ಸುಲಿದ ಬಾಳೆಯ ಹಣ್ಣಿನಂದದಿ
ಕಳೆದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲಿನ್ನೇನು"

ಎಂದು ಕನ್ನಡ ಭಾಷೆಯ ಧೀಮಂತಿಕೆ, ಶ್ರೀಮಂತಿಕೆ ಎಂತಹದ್ದು ಎಂದಿದ್ದಾರೆ. ಕನ್ನಡದಲ್ಲಿ ಇಲ್ಲದೆ ಇರುವಂತಹದ್ದು ಸಂಸ್ಕೃತದಲ್ಲಿ, ಅನ್ಯ ಭಾಷೆಗಳಲ್ಲಿ ಅಂತಹ ವಿಶೇಷತೆ ಏನಿದೆ? ಕನ್ನಡ ಭಾಷೆ ಸರಳ, ಸುಂದರ, ಸುಲಲಿತವಾಗಿದೆ ಎಂದು ಮಹಲಿಂಗರಂಗರು ಮನೋಜ್ಞವಾಗಿ ತಿಳಿಸಿದ್ದಾರೆ.

ಸಾವಿರಾರು ವರ್ಷಗಳಿಂದ ಸಾಂಸ್ಕೃತಿಕವಾಗಿ ಹಾಗೂ ರಾಜಕೀಯವಾಗಿ ತನ್ನದೇ ಆದ ಪರಂಪರೆಯನ್ನು ಹೊಂದಿರುವ ಕರ್ನಾಟಕ ರಾಜ್ಯ ಇಂದಿನ ರೂಪುರೇಷೆಯನ್ನು ಪಡೆಯಲು ದೀರ್ಘವಾದ ಏಕೀಕರಣ ಹೋರಾಟವನ್ನೇ ನಡೆಸಿದೆ. ಕನ್ನಡ ನಾಡು ಎಲ್ಲ ಕಾಲದಲ್ಲಿಯೂ ನಿರ್ದಿಷ್ಟವಾದ ಗಡಿಯನ್ನು ಹೊಂದಿರದೆ, ಇದರ ವಿಸ್ತಾರ ಮತ್ತು ವ್ಯಾಪ್ತಿಯು ರೂಪಾಂತರಗಳನ್ನು ಹೊಂದುತ್ತ ಹೋಗಿರುವುದನ್ನು ಕಾಣಬಹುದು. ಬಾದಾಮಿ ಚಾಲುಕ್ಯರಿಂದ ಹಿಡಿದು ವಿಜಯನಗರ ಸಾಮ್ರಾಜ್ಯ



ನಾಶವಾದ ನಂತರ ಕರ್ನಾಟಕ ವಿಭಾಗವಾಯಿತು. ಬ್ರಿಟಿಷರ 'ಒಡೆದು ಆಳುವ ನೀತಿ'ಯಿಂದಾಗಿ ಕರ್ನಾಟಕದ ಪ್ರಾಂತಗಳು ಹಾಗೂ ಕನ್ನಡದ ಭಾಷಿಕ ಜನರು 20 ಆಡಳಿತ ಭಾಗಗಳಲ್ಲಿ ಹರಿದು ಹಂಚಿ ಹೋಗಿದ್ದರು. ಪರಕೀಯ ಆಳ್ವಿಕೆಗೆ ಒಳಪಟ್ಟ ಕನ್ನಡಿಗರು ಅನ್ಯ ಭಾಷೆ, ಅನ್ಯ ಸಂಸ್ಕೃತಿ, ಆಚಾರ-ವಿಚಾರಗಳನ್ನು ಅನುಸರಿಸಬೇಕಾಯಿತು.

ಬಾಂಬೆ ಸಂಸ್ಥಾನದಲ್ಲಿ ಮರಾಠಿ ಆಡಳಿತ ಭಾಷೆಯಾದರೆ, ಹೈದರಾಬಾದ್ ಸಂಸ್ಥಾನದಲ್ಲಿ ಉರ್ದು, ಮದ್ರಾಸ್ ಸಂಸ್ಥಾನದಲ್ಲಿ ತಮಿಳು ಆಡಳಿತ ಭಾಷೆ ಮತ್ತು ಶಿಕ್ಷಣ ಮಾಧ್ಯಮದ ಭಾಷೆಯಾಗಿತ್ತು. ಇಂತಹ ಶೋಚನೀಯ ಸ್ಥಿತಿಯಿಂದ ಕನ್ನಡಿಗರನ್ನು ಮುಕ್ತಗೊಳಿಸಿ ಒಂದುಗೂಡಿಸುವ ಹೋರಾಟವೇ 'ಕರ್ನಾಟಕ ಏಕೀಕರಣ' ಚಳುವಳಿಯಾಗಿದೆ.

ಕರ್ನಾಟಕ ಏಕೀಕರಣದ ರೂವಾರಿ ಎಂದೇ ಖ್ಯಾತರಾದ ಆಲೂರು ವೆಂಕಟರಾಯರು 1917ರಲ್ಲಿ ಅಂದಿನ ಕರ್ನಾಟಕದ ದುಸ್ಥಿತಿಯನ್ನು ಕುರಿತು ಛೇ ಕರ್ನಾಟಕವೆಲ್ಲಿದೆ ಎಂದು ಉದ್ಗರಿಸಿದರು. ವೆಂಕಟರಾಯರು 'ಕರ್ನಾಟಕದ ಗತ ವೈಭವ' ಎಂಬ ಗ್ರಂಥ ರಚಿಸಿ, ಅದರಲ್ಲಿ ಕರ್ನಾಟಕದ ಪುರಾತನ ಇತಿಹಾಸ, ಕನ್ನಡಿಗರ ಸಾಹಸ, ಕನ್ನಡ ನಾಡಿನ ಪರಂಪರೆಯನ್ನು ಕುರಿತು ಹೇಳಿದರು. ಈ ಕೃತಿಯಿಂದ ಪ್ರಭಾವಿತರಾದ ಕನ್ನಡಿಗರು ಸಕ್ರಿಯವಾಗಿ ಆಂದೋಲನದಲ್ಲಿ ಪಾಲ್ಗೊಳ್ಳುವಂತಾಯಿತು.


> 9 ಜಿಲ್ಲೆಗಳನ್ನೊಳಗೊಂಡ ಹಳೆಯ ಮೈಸೂರು ಸಂಸ್ಥಾನ, ಮದ್ರಾಸ್ ಪ್ರಾಂತದಿಂದ ದಕ್ಷಿಣ ಕನ್ನಡ, ಕೊಡಗು, ಕೊಳ್ಳೇಗಾಲ ಮತ್ತು ಬಳ್ಳಾರಿ. ಹೈದರಾಬಾದ್ ಪ್ರಾಂತದಿಂದ ರಾಯಚೂರು, ಬೀದರ್, ಗುಲ್ಬರ್ಗಗಳು. ಬಾಂಬೆ ಪ್ರಾಂತದಿಂದ ಬೆಳಗಾಂ, ಧಾರವಾಡ, ಬಿಜಾಪುರ, ಉತ್ತರ ಕನ್ನಡ. ಸ್ವತಂತ್ರ ಆಡಳಿತ ನಡೆಸುತ್ತಿದ್ದ ಸಂಸ್ಥಾನಗಳಿಂದ ಸಂಡೂರು, ಜಮಖಂಡಿ, ಮುದ್ದೇಬಿಹಾಳ ಮತ್ತು ಸವಣೂರುಗಳು ಸೇರಿ 1,91,756 ಚ. ಕಿ. ಮೀ. ಭೂ ಪ್ರದೇಶವು ವಿಶಾಲ ಮೈಸೂರು ರಾಜ್ಯ ಎಂದು ಅಸ್ತಿತ್ವಕ್ಕೆ ಬಂತು. ತದನಂತರ 1973ರ ನವೆಂಬರ್ 1ರಂದು ಕರ್ನಾಟಕ ರಾಜ್ಯ ಎಂದು ದೇವರಾಜ್ ಅರಸು ಅವರ ಕಾಲದಲ್ಲಿ ಮರು ನಾಮಕರಣವಾಯಿತು.

ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿದ ಮತ್ತೊಬ್ಬ ವ್ಯಕ್ತಿ ಬೆನಗಲ್ ರಾಮರಾಯರು 'ಸುಹಾಸಿನಿ' ಮಾಸಪತ್ರಿಕೆಯಲ್ಲಿ ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ನಾಡಗೀತೆಯು ಕನ್ನಡಿಗರ ಮಂತ್ರವಾಯಿತು. ಬಿಎಂಶ್ರೀ, ಗೋವಿಂದ ಪೈ, ಬೇಂದ್ರೆ, ಅನಕೃ, ಕುವೆಂಪು, ಹೀಗೆ ಅನೇಕ ಸಾಹಿತಿಗಳ ಗೀತೆಗಳು ಮತ್ತು ಲೇಖನಗಳು ಪ್ರಕಟವಾದವು. ಹಲವಾರು ಪತ್ರಿಕೆಗಳು ಜ್ಞಾನಭೋದಕ, ಕರ್ನಾಟಕ ಪತ್ರ, ಚಂದ್ರೋದಯ, ಧನಂಜಯ, ಕರ್ನಾಟಕ ವೃತ್ತ, ರಾಜಹಂಸ, ವಾಗ್ಭೂಷಣ, ವಾಗ್ದೇವಿ, ವಿಜಯ, ಶುಭೋದಯ, ಕರ್ಮವೀರ, ಕನ್ನಡ ನುಡಿ, ಪ್ರಬುದ್ಧ ಕರ್ನಾಟಕ ಇತ್ಯಾದಿ ಪತ್ರಿಕೆಗಳು ನಾಡಿನ ಏಕೀಕರಣಕ್ಕೆ ತನ್ನದೇ ಆದ ವಿಶಿಷ್ಟ ಲೇಖನ, ಕಾವ್ಯಗಳನ್ನು ಪ್ರಕಟಿಸುವ ಮೂಲಕ ತಮ್ಮ ಕಾಣಿಕೆ ನೀಡಿದವು.

1890ರಲ್ಲಿ "ಕರ್ನಾಟಕ ವಿದ್ಯಾವರ್ಧಕ ಸಂಘ"ವು ಧಾರವಾಡದಲ್ಲಿ ಸ್ಥಾಪನೆಯಾಯಿತು. ನಂತರ 1915ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರಿನಲ್ಲಿ ಆರಂಭವಾಯಿತು. 1916 ರಲ್ಲಿ "ಕರ್ನಾಟಕ ಸಭಾ" ಇತ್ಯಾದಿ ಸಂಘಟನೆಗಳು ಜನ ಜಾಗೃತಿ ಮೂಡಿಸಲು ಶ್ರಮಿಸಿದವು. 1924ರಲ್ಲಿ ಬೆಳಗಾವಿಯಲ್ಲಿ ಜರುಗಿದ "ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ"ದಲ್ಲಿ "ಕರ್ನಾಟಕ ಏಕೀಕರಣ"ದ ಬಗ್ಗೆ ತೀವ್ರ ಚರ್ಚೆ ನಡೆಸಿ ಮೊದಲ ಬಾರಿಗೆ ಅಧಿವೇಶನ ನಡೆಸಿದರು. ಇದರ ಅಧ್ಯಕ್ಷತೆಯನ್ನು ಸರ್ ಸಿದ್ದಪ್ಪ ಕಂಬಳಿಯವರು ವಹಿಸಿಕೊಂಡಿದ್ದರು.

"ಕರ್ನಾಟಕ ಏಕೀಕರಣ ಸಭಾ" ಕೆಲಕಾಲದ ನಂತರ "ಕರ್ನಾಟಕ ಏಕೀಕರಣ ಸಂಘ" ಎಂದು ಪುನರ್ ನಾಮಕರಣ ಪಡೆಯಿತು. ಇದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯೊಂದಿಗೆ ಜೊತೆಯಾಗಿ ಏಕೀಕರಣ ಚಳುವಳಿಯನ್ನು ಮುಂದುವರಿಸಿತು. 1926ರಲ್ಲಿ ಹಿಂದುಸ್ತಾನಿ ಸೇವಾದಳವು ಏಕೀಕರಣಕ್ಕಾಗಿ ಸಹಿ ಸಂಗ್ರಹ ಅಭಿಯಾನ ನಡೆಸಿ ಸುಮಾರು 36,000 ಸಹಿ ಸಂಗ್ರಹಿಸುವ ಮೂಲಕ ಈ ಹೋರಾಟಕ್ಕೆ ಬೆಂಬಲ ನೀಡಿದವು. 1928ರಲ್ಲಿ ಕೇಂದ್ರ ಸರ್ಕಾರ ಕನ್ನಡಿಗರ ಅಹವಾಲನ್ನು ಸರಿಪಡಿಸಲು 'ನೆಹರು ಸಮಿತಿ' ಯನ್ನು ನೇಮಿಸಿತು. "ಕರ್ನಾಟಕ ಏಕೀಕರಣ ಸಂಘ" ಮತ್ತು "ಪ್ರದೇಶ ಕಾಂಗ್ರೆಸ್ ಸಮಿತಿ" ಗಳೆರಡು ನೆಹರು ಆಯೋಗದ ಮುಂದೆ ತಮ್ಮ ಬೇಡಿಕೆಗಳನ್ನು ಇಟ್ಟವು.

1937ರಲ್ಲಿ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ಏಕೀಕರಣ ತನ್ನ ಗುರಿ ಎಂದು ನಿರ್ಧರಿಸಿತು. ಆದರೆ ಅನೇಕ ಆಡಳಿತಗಳಿಗೊಳಪಟ್ಟ ಕರ್ನಾಟಕವನ್ನು ಒಂದುಗೂಡಿಸುವ ಕಾರ್ಯ ಸರಳವಾಗಿರಲಿಲ್ಲ. ಯಾವ ಸ್ಥಾನಿಕ ಅರಸರು ತಮ್ಮ ಅಧಿಕಾರವನ್ನು ಬಿಟ್ಟುಕೊಡಲು ಸಿದ್ಧರಿರಲಿಲ್ಲ. 1946 ರ ಅಂತ್ಯದ ವೇಳೆಗೆ ಬ್ರಿಟಿಷರು ಭಾರತವನ್ನು ಬಿಡುವುದು ಬಹುತೇಕ ಖಚಿತವಾಯಿತು. 1953 ರಂದು ಪ್ರತ್ಯೇಕ ಆಂದ್ರ ನಿರ್ಮಾಣವಾದ ಮೇಲೆ ಮದ್ರಾಸ್ ಪ್ರಾಂತ್ಯದಲ್ಲಿ ಸೇರಿದ್ದ ಬಳ್ಳಾರಿಯನ್ನು ಯಾವ ಕಡೆ ಸೇರಿಸಬೇಕೆಂಬ ಸಮಸ್ಯೆ ಬಂತು. ಆಗ ಜಸ್ಟಿಸ್ ವಾಂಚೂ ಸಮಿತಿಯು ಬಳ್ಳಾರಿ ಸೇರಿದಂತೆ ಜಿಲ್ಲೆಯ ಆದವಾನಿ, ಆಲೂರು, ರಾಮದುರ್ಗ ತಾಲೂಕುಗಳನ್ನು ಆಂಧ್ರಕ್ಕೂ. ಬಳ್ಳಾರಿ ಸೇರಿದಂತೆ ಉಳಿದ ತಾಲೂಕುಗಳನ್ನು ಮೈಸೂರು ರಾಜ್ಯಕ್ಕೆ ಸೇರ್ಪಡೆ ಮಾಡಲಾಯಿತು. ಏಕೀಕರಣವನ್ನು ಒತ್ತಾಯಿಸಿ ಈಗಿನ ಗದಗ ಜಿಲ್ಲೆಯ ರೋಣ ತಾಲೂಕಿನ ಜಕ್ಕಲಿ ಗ್ರಾಮದ ಅಂದಾನಪ್ಪ ದೊಡ್ಡಮೇಟಿ ಅವರು ಆಮರಣಾಂತ ಉಪವಾಸ ಕೈಗೊಂಡರು. 1953 ಡಿಸೆಂಬರ್ 29ರಲ್ಲಿ ಕೇಂದ್ರ ಸರ್ಕಾರ "ರಾಜ್ಯ ಪುನರ್ವಿಂಗಡನ ಆಯೋಗ" ಸ್ಥಾಪಿಸಿ, ಕೇಂದ್ರ ಸರ್ಕಾರವು ಫಜಲ್ ಅಲಿ ಆಯೋಗದ ಶಿಫಾರಸ್ಸುಗಳನ್ನು ಕೆಲವೊಂದು ತಿದ್ದುಪಡಿಗಳೊಂದಿಗೆ ವಿಶಾಲ ಮೈಸೂರು ರಾಜ್ಯ ನವೆಂಬರ್ 1, 1956ರಂದು ಅಸ್ತಿತ್ವಕ್ಕೆ ಬಂದಿತು.



– ಈಶ್ವರ ಕುರಿ (ಜಕ್ಕಲಿ)

### ಪಿಎಸ್ಐ ಅಮಾನತ್ತಿಗೆ ಆಗ್ರಹಿಸಿ ನಡೆಯುತ್ತಿರುವ ಧರಣಿ ಎರಡನೇ ದಿನಕ್ಕೆ

# ಕ್ರಮ ಕೈಗೊಳ್ಳುವವರೆಗೂ ಧರಣಿ ಮುಂದುವರೆಸುತ್ತೇವೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ನವರಾತ್ರಿಯ ಸಂದರ್ಭದಲ್ಲಿ ಗೋಸಾವಿ ಜನಾಂಗದ ಮೇಲೆ ಹಲ್ಲೆ ನಡೆಸಿದ ಅನ್ಯ ಕೋಮಿನ ಯುವಕರ ಬಗ್ಗೆ ದೂರು ಸಲ್ಲಿಸಲು ಪೊಲೀಸ್ ಠಾಣೆಗೆ ತೆರಳಿದ್ದ ಗೋಸಾವಿ ಜನಾಂಗದ ಯುವಕರು, ಮಹಿಳೆಯರ ಮೇಲೆ ಲಾಠಿಯಿಂದ ಹಲ್ಲೆ ನಡೆಸಿದ ಪಿಎಸೈ ಈರಣ್ಣ ರಿತ್ತಿ ಅವರನ್ನು ಅಮಾನತ್ತುಗೊಳಿಸುವಂತೆ ಆಗ್ರಹಿಸಿ ಶ್ರೀರಾಮ ಸೇನೆಯ ನೇತೃತ್ವದಲ್ಲಿ ವಿವಿಧ ಹಿಂದೂ ಸಂಘಟನೆಗಳು, ಗೋಸಾವಿ ಸಮಾಜದವರು ಪಟ್ಟಣದ ತಹಸೀಲ್ದಾರ ಕಚೇರಿಯೆದುರು ಕೈಗೊಂಡಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಗುರುವಾರ 2ನೇ ದಿನಕ್ಕೆ ಕಾಲಿಟ್ಟಿದೆ.

ಗೋಸಾವಿ ಸಮಾಜದ ಹಿರಿಯ ಮುಖಂಡ ಬಾಳಪ್ಪ ಗೋಸಾವಿ ಮಾತನಾಡಿ, ದಸರಾ ಹಬ್ಬದಲ್ಲಿ ಅನ್ಯ ಕೋಮಿನ ಯುವಕರು ನಮ್ಮ ಸಮಾಜದ ಯುವಕರ ಮೇಲೆ ಹಲ್ಲೆ ಮಾಡಿದ್ದರು. ಇದರ ಬಗ್ಗೆ ಪೊಲೀಸ್ ಠಾಣೆಗೆ ದೂರ ಕೊಡಲು ಹೋದಾಗ ಪಿಎಸ್ಐ ಈರಪ್ಪ ರಿತ್ತಿ ಏನು ಅಂತಾ ವಿಚಾರಿಸದೆ ನಮ್ಮ ಸಮಾಜದ ಹೆಣ್ಣುಮಕ್ಕಳು, ಯುವಕರ ಮೇಲೆ ಹಲ್ಲೆ ಮಾಡಿದ್ದಾರೆ. ಈ ಘಟನೆಗೆ ಸಂಬಂಧಿಸಿ ಅವರ ಮೇಲೆ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದಲ್ಲಿ ಬೆಳಗಾವಿ ಸುವರ್ಣಸೌಧದಿಂದ ಐ.ಜಿ ಕಚೇರಿಯವರಿಗೆ ಶ್ರೀರಾಮಸೇನಾ ಹಾಗೂ ಹಿಂದೂಪರ ಸಂಘಟನೆಗಳ ನೇತೃತ್ವದಲ್ಲಿ ಗೋಸಾವಿ ಸಮಾಜದವರು ಪಾದಯಾತ್ರೆ ನಡೆಸಲಿದ್ದಾರೆ. ಪಿಎಸ್ಐ ಅಮಾನತ್ ಆಗುವರೆಗೂ ಧರಣಿ ಸತ್ಯಾಗ್ರಹ ಮುಂದುವರೆಸುತ್ತೇವೆ ಎಂದು ಹೇಳಿದರು.




ಈ ಸಂದರ್ಭದಲ್ಲಿ ಶ್ರೀರಾಮ ಸೇನಾ ಕಾರ್ಯಕರ್ತರಾದ ಈರಣ್ಣ ಪೂಜಾರ, ಪ್ರಾಣೇಶ್ ವ್ಯಾಪಾರಿ, ಬಸವರಾಜ್ ಚಕ್ರಸಾಲಿ, ಹನುಮಂತ ರಾಮಗೇರಿ, ಮಂಜುನಾಥ ತಿಮ್ಮಣ್ಣವರ, ಮಲ್ಲಿಕಾರ್ಜುನ ಹಾಳತೋಟದ, ಪ್ರವೀಣ ಕುಂಬಾರ, ಎಂ.ಎನ್. ಬಾಡಗಿ, ಅಮಿತ್ ಗುಡಗೇರಿ, ಕಿರಣ ಗಾಣಿಗೇರ, ಯಶವಂತ ಭಜಂತ್ರಿ, ಗೋಸಾವಿ ಸಮುದಾಯದ ಗೋವಿಂದ್, ಹರೀಶ್, ಸಾಗರ್, ನಿಖಿಲ್, ವಿಶ್ವ, ರಾಘವೇಂದ್ರ, ಆಕಾಶ್, ಸಂಜು, ಪವನ್, ಕೃಷ್ಣ, ಕಿಶನ್, ಸುರೇಶ, ಮಾಧವ, ಶಶಿ, ನಾಗು, ರಾಜು, ಸಂತೋಷ್ ಮುಂತಾದವರು ಇದ್ದರು.

ತಹಸೀಲ್ದಾರ ಕಚೇರಿ ರಜೆ ಇರುವದರಿಂದ ಗೇಟ್‌ನ ಹೊರಗಡೆ ಕುಳಿತು ಧರಣಿ ಮುಂದುವರೆಸಿದ್ದಾರೆ. ಎರಡನೇ ದಿನ ಧರಣಿ ಸ್ಥಳಕ್ಕೆ ಧಾರವಾಡ ವಿಭಾಗದ ಶ್ರೀರಾಮ ಸೇನಾ ಅಧ್ಯಕ್ಷ ಗದಿಗೆಪ್ಪ ಕುರುವತ್ತಿ ಹಾಗೂ ಸಂಗಡಿಗರು ಆಗಮಿಸಿ ಪ್ರತಿಭಟನಾಕಾರರನ್ನು ಬೆಂಬಲಿಸಿದರು. ಜನರ ರಕ್ಷಣೆ ಮಾಡುವವರಿಂದಲೇ ಈ ರೀತಿ ದಬ್ಬಾಳಿಕೆ ನಡೆಯುತ್ತಿರುವದು ಯಾವ ನ್ಯಾಯ, ಕಳೆದ 15-20 ದಿನಗಳಿಂದ ಈ ಕುರಿತು ನಡೆಯುತ್ತಿರುವ ಹೋರಾಟಕ್ಕೆ ಇಲಾಖೆ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳದಿರುವದು ವಿಷಾದನೀಯವಾಗಿದೆ. ಕೂಡಲೇ ಸಂಬಂಧಪಟ್ಟವರ ಮೇಲೆ ಕ್ರಮ ಜರುಗಿಸಿ ಎಂದು ಆಗ್ರಹಿಸಿದರು.

# ಶ್ರೀ ಹನುಮಂತದೇವರ ರಥೋತ್ಸವ ನಾಳೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಪಟ್ಟಣದ ಪೇಠೆ ರಸ್ತೆಯಲ್ಲಿರುವ ಪುರಾತನ ಪ್ರಸಿದ್ಧ ಹಾವಳಿ ಹನುಮಂತದೇವರ ಜಾತ್ರೆಯು ನವೆಂಬರ್ 2ರ ದೀಪಾವಳಿ ಪ್ರತಿಪದೆಯ(ಪಾಡ್ಯ) ದಿವಸ ನೆರವೇರಲಿದೆ.

ಶನಿವಾರ ಮುಂಜಾನೆ ದೇವರಿಗೆ ವಿಶೇಷ ಪೂಜೆ, ಅಲಂಕಾರ ಮತ್ತು ನೈವೇದ್ಯ ಕಾರ್ಯಕ್ರಮ ನಡೆಯಲಿದ್ದು, ಸಂಜೆ 6 ಗಂಟೆಗೆ ಮಹಾರಥೋತ್ಸವ, ನ.3ರಂದು ಕಡುಬಿನ ಕಾಳಗ, ನ.4ರಂದು ಓಕುಳಿ ಜರುಗಲಿದೆ. ರಥೋತ್ಸವ ಕಾರ್ಯಕ್ರಮದ ಸಾನ್ನಿಧ್ಯವನ್ನು ಹೂವಿನಶಿಗ್ಲಿ ವಿರಕ್ತಮಠದ ಚನ್ನವೀರ ಮಹಾಸ್ವಾಮಿಗಳು ವಹಿಸಲಿದ್ದಾರೆ.

ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ದೇವಸ್ಥಾನ ಕಮಿಟಿ, ಹಾವಳಿ ಆಂಜನೇಯ ಭಜನಾ ಮಂಡಳಿ, ಹಿಂದೂ ಮಹಾಸಭಾ ಗಣಪತಿ ಸೇವಾ ಮಂಡಳಿ ಹಾಗೂ ಯುವಕ ಮಂಡಳಿ ಅಧ್ಯಕ್ಷರು ಮತ್ತು ಸರ್ವ ಸದಸ್ಯರು ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

## IPL 2025ರ ರಿಟೇನ್ ಆಟಗಾರರ ಪಟ್ಟಿ ರಿಲೀಸ್: ಘಟಾನುಘಟಿಗಳಿಗೆ ಕೊಕ್!




■ವಿಜಯಸಾಕ್ಷಿ ಸುದ್ದಿ, ನವದೆಹಲಿ

ಬಹುನಿರೀಕ್ಷಿತ ಐಪಿಎಲ್ ರಿಟೆನ್ಶನ್ ಲಿಸ್ಟ್ ಬಿಡುಗಡೆಯಾಗಿದೆ. ಫ್ರಾಂಚೈಸಿಗಳು ಒಂದೊಂದಾಗಿ ತಾವು ಉಳಿಸಿಕೊಂಡ ಆಟಗಾರರ ಪಟ್ಟಿ ಬಿಡುಗಡೆ ಮಾಡಲಾರಂಭಿಸಿವೆ. ಅಚ್ಚರಿಯ ರೀತಿಯಲ್ಲಿ ಕೆಲವು ಘಟಾನುಘಟಿಗಳನ್ನೇ ರಿಲೀಸ್ ಮಾಡಿದೆ.

ಕೆಎಲ್ ರಾಹುಲ್, ಶ್ರೇಯಸ್ ಅಯ್ಯರ್, ಇಶಾನ್ ಕಿಶನ್, ಮೊಹಮ್ಮದ್ ಶಮಿ, ಯುಜ್ವೇಂದ್ರ ಚಹಲ್, ರಿಷಭ್ ಪಂತ್ ಸೇರಿ ಪ್ರಮುಖ ಆಟಗಾರರೇ ಈ ಬಾರಿ ಹರಾಜಿನಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ರಿಟೇನ್ ಆದ ಆಟಗಾರರ ಪೈಕಿ ಅತಿ ಹೆಚ್ಚು ಮೊತ್ತ ಪಡೆದ ಭಾರತದ ಮೊದಲ ಆಟಗಾರ ವಿರಾಟ್ ಕೊಹ್ಲಿ ಆಗಿದ್ದಾರೆ. ಅವರು 21 ಕೋಟಿ ಪಡೆದಿದ್ದಾರೆ. ಆದರೆ ಒಟ್ಟಾರೆ ಹೆನ್ರಿಚ್ ಕ್ಲಾಸೆನ್ 23 ಕೋಟಿ ಪಡೆದು ದಾಖಲೆ ಬರೆದಿದ್ದಾರೆ. ನಿಕೋಲಸ್ ಪೂರನ್ ಸಹ 21 ಕೋಟಿ ಪಡೆದಿದ್ದಾರೆ.

**RCB:-** ವಿರಾಟ್ ಕೊಹ್ಲಿ (21 ಕೋಟಿ), ರಜತ್ ಪಾಟೀದಾರ್ (11 ಕೋಟಿ), ಯಶ್ ದಯಾಳ್ (5 ಕೋಟಿ).

**CSK:-** ಋತುರಾಜ್ ಗಾಯಕ್ವಾಡ್ (18 ಕೋಟಿ), ಮತೀಶಾ ಪತಿರಾಣ (13 ಕೋಟಿ), ಶಿವಂ ದುಬೆ (12 ಕೋಟಿ), ರವೀಂದ್ರ ಜಡೇಜಾ (18 ಕೋಟಿ), ಎಂಎಸ್ ಧೋನಿ (4 ಕೋಟಿ).

KKR:- ರಿಂಕು ಸಿಂಗ್ (13 ಕೋಟಿ), ವರುಣ್ ಚಕ್ರವರ್ತಿ (12 ಕೋಟಿ), ಸುನಿಲ್ ನರೇನ್ (12 ಕೋಟಿ), ಆ್ಯಂಡ್ರೆ ರಸೆಲ್ (12 ಕೋಟಿ), ಹರ್ಷಿತ್ ರಾಣಾ (4 ಕೋಟಿ), ರಮಣ್ ದೀಪ್ ಸಿಂಗ್ (4 ಕೋಟಿ).

**ಪಂಜಾಬ್:-** ಅಶುತೋಶ್ ಶರ್ಮಾ (4 ಕೋಟಿ), ಶಶಾಂಕ್ ಸಿಂಗ್ (5.5 ಕೋಟಿ).

**RR:-** ಸಂಜು ಸ್ಯಾಮ್ಸನ್ (18 ಕೋಟಿ), ಯಶಸ್ವಿ ಜೈಸ್ವಾಲ್ (18 ಕೋಟಿ), ರಿಯಾನ್ ಪರಾಗ್ (14 ಕೋಟಿ), ಧ್ರುವ್ ಜುರೆಲ್ (14 ಕೋಟಿ), ಶಿಮ್ರಾನ್ ಹೆಟ್ಮೆಯರ್ (11 ಕೋಟಿ), ಸಂದೀಪ್ ಶರ್ಮಾ (4 ಕೋಟಿ).

**LSG:-** ನಿಕೋಲಸ್ ಪೂರನ್ (21 ಕೋಟಿ), ರವಿ ಬಿಷ್ಣೋಯ್ (11 ಕೋಟಿ), ಮಯಾಂಕ್ ಯಾದವ್ (11 ಕೋಟಿ), ಮೊಹ್ಸಿನ್ ಖಾನ್ (4 ಕೋಟಿ).

**MI:-** ರೋಹಿತ್ ಶರ್ಮಾ (16.30 ಕೋಟಿ), ಹಾರ್ದಿಕ್ ಪಾಂಡ್ಯ (16.35 ಕೋಟಿ), ಜಸ್ಪ್ರೀತ್ ಬುಮ್ರಾ (18 ಕೋಟಿ), ಸೂರ್ಯಕುಮಾರ್ ಯಾದವ್ (16.35 ಕೋಟಿ), ತಿಲಕ್ ವರ್ಮಾ (8 ಕೋಟಿ).

**SRH:-** ಪ್ಯಾಟ್ ಕಮಿನ್ಸ್ (18 ಕೋಟಿ), ಹೆನ್ರಿಚ್ ಕ್ಲಾಸೆನ್ (23 ಕೋಟಿ), ಅಭಿಷೇಕ್ ಶರ್ಮಾ (14 ಕೋಟಿ), ಟ್ರಾವಿಸ್ ಹೆಡ್ (14 ಕೋಟಿ), ನಿತೀಶ್ ರೆಡ್ಡಿ (6 ಕೋಟಿ), ಆಯುಷ್ ಬದೋನಿ (4 ಕೋಟಿ).

**DC:-** ಅಕ್ಷರ್ ಪಟೇಲ್ (16.5 ಕೋಟಿ), ಕುಲ್ದೀಪ್ ಯಾದವ್ (14.25 ಕೋಟಿ), ಟ್ರಿಸ್ಟಾನ್ ಸ್ಟಬ್ಸ್ (10 ಕೋಟಿ), ಅಭಿಷೇಕ್ ಪೋರೆಲ್ (4 ಕೋಟಿ).

**GT:-** ರಶೀದ್ ಖಾನ್ (18 ಕೋಟಿ), ಶುಭ್ಮನ್ ಗಿಲ್ (16.5 ಕೋಟಿ), ಸಾಯಿ ಸುದರ್ಶನ್ (8.5 ಕೋಟಿ), ರಾಹುಲ್ ತೆವಾಟಿಯಾ (4 ಕೋಟಿ), ಶಾರೂಖ್ ಖಾನ್ (4 ಕೋಟಿ).

**ಹರಾಜಿನಲ್ಲಿ ಕಾಣಿಕೊಳ್ಳಲಿರುವ ಭಾರತದ ದೊಡ್ಡ ಹೆಸರುಗಳು:** ರಿಷಭ್ ಪಂತ್, ಕೆಎಲ್ ರಾಹುಲ್, ಶ್ರೇಯಸ್ ಅಯ್ಯರ್, ಅರ್ಷದೀಪ್ ಸಿಂಗ್, ಇಶಾನ್ ಕಿಶನ್, ಮೊಹಮ್ಮದ್ ಶಮಿ, ಯುಜ್ವೇಂದ್ರ ಚಹಲ್, ರವಿಚಂದ್ರನ್ ಅಶ್ವಿನ್, ವಾಷಿಂಗ್ಟನ್ ಸುಂದರ್, ಶಾರ್ದೂಲ್ ಠಾಕೂರ್, ರಾಹುಲ್ ಚಹರ್.

## ಆಂಧ್ರದಲ್ಲಿ ಪಟಾಕಿ ಸ್ಫೋಟ: ಓರ್ವ ಸಾವು, 6 ಮಂದಿಗೆ ಗಾಯ!

■ವಿಜಯಸಾಕ್ಷಿ ಸುದ್ದಿ, ಆಂಧ್ರಪ್ರದೇಶ

ಪಟಾಕಿ ಸ್ಫೋಟಗೊಂಡು ವ್ಯಕ್ತಿಯೋರ್ವ ಸಾವನ್ನಪ್ಪಿದ್ದು, 6 ಮಂದಿಗೆ ಗಂಭೀರ ಗಾಯವಾಗಿರುವ ಘಟನೆ ಆಂಧ್ರಪ್ರದೇಶದ ಏಲೂರು ಜಿಲ್ಲೆಯಲ್ಲಿ ಜರುಗಿದೆ.

ಬೈಕ್ ನಲ್ಲಿ ಪಟಾಕಿ ಸಾಗಿಸುವಾಗ ಈ ಅವಘಡ ಸಂಭವಿಸಿದೆ. ರಸ್ತೆಯ ಗುಂಡಿಗೆ ಬೈಕ್ ಇಳಿದಾಗ ಈರುಳ್ಳಿ ಪಟಾಕಿ ಕೆಳಗೆ ಬಿದ್ದಿದೆ. ಪರಿಣಾಮ ಕ್ಷಣದಲ್ಲೇ ಪಟಾಕಿ ಸ್ಫೋಟಗೊಂಡಿದೆ.

ಪಟಾಕಿ ಬ್ಲಾಸ್ಟ್ ಆದ ಪರಿಣಾಮ ಸುಧಾಕರ್ ಎಂಬಾತ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಅದೇ ರಸ್ತೆಯ ಪಕ್ಕದಲ್ಲಿ ನಿಂತುಕೊಂಡು ಮಾತಾಡುತ್ತಿದ್ದಾಗ ಆರು ಮಂದಿಗೆ ಗಾಯಗೊಂಡಿದ್ದಾರೆ.

# ಬೆಳಕಿನ ಹಬ್ಬ ದೀಪಾವಳಿ

ದೀಪಾವಳಿ ಹಿಂದೂಗಳಿಗೆಲ್ಲ ಸಡಗರ ಸಂಭ್ರಮದ ಹಬ್ಬ. ವರ್ಷವಿಡೀ ಆಚರಿಸುವ ಹಬ್ಬಗಳಲ್ಲೆಲ್ಲಾ ದೀಪಾವಳಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ಬೆಳಕಿನ ಹಬ್ಬ ದೀಪಾವಳಿ ಮತ್ತೆ ಬಂದಿದೆ. ಭಾರತದಾದ್ಯಂತ ಆಚರಿಸುವ ಹಬ್ಬವೆಂದರೆ ದೀಪಾವಳಿ 'ತಮಸೋಮಾ ಜ್ಯೋತಿರ್ಗಮಯ' ಕತ್ತಲಿನಿಂದ ಬೆಳಕಿನ ಕಡೆಗೆ ಸಾಗುವ ದೀಪಾವಳಿ ಎಂದರೆ ಯಾರಿಗೆ ಖುಷಿಯಿಲ್ಲ ಹೇಳಿ. ದೀಪಗಳ ಹಬ್ಬದ ವೈಶಿಷ್ಟವೇ ಅಂಥಾದ್ದು.

ದೀಪ+ ವಳಿ= ದೀಪಾವಳಿ. ಎಲ್ಲಿ ಕತ್ತಲಿದೆಯೋ ಅಲ್ಲಿ ಬೆಳಕಿರಬೇಕು. ಕತ್ತಲೆಂದರೆ ಅಜ್ಞಾನ, ಕತ್ತಲೆಂದರೆ ಅಂಧಕಾರ. ಕತ್ತಲೆಂದರೆ ಸೋಲು. ಬೆಳಕು ಎಂದರೆ ಯಶಸ್ಸು. ಬೆಳಕೆಂದರೆ ಕಷ್ಟಗಳ ಸಂಕೋಲೆಯಿಂದ ಬಿಡುಗಡೆ. ಅಂದರೆ ನಮ್ಮ ಅಜ್ಞಾನವನ್ನು ಬೆಳಕಿನ ಮೂಲಕ ತೊಡೆದು ಹಾಕುವ ಹಬ್ಬವೇ ದೀಪಾವಳಿ. ಈ ದೀಪಾವಳಿ ಅಮಾವಾಸ್ಯೆಗೂ ಇಲ್ಲಿ ಮಹತ್ವವಿದೆ. ಅಮಾವಾಸ್ಯೆಯ ದಿನ ಲಕ್ಷ್ಮೀ ಪೂಜೆಯೂ ನಡೆಯುತ್ತದೆ. ಲಕ್ಷ್ಮಿಯು ಕತ್ತಲನ್ನು ಕಳೆದು ಬೆಳಕು ತರುವ ಮಹಾ ತೇಜಸ್ವಿನಿ. ಕತ್ತಲೆಯಿಂದ ಬೆಳಕಿನ ಕಡೆಗೆ ಸಾಗುವುದೇ ಬದುಕು.

ಹೀಗಾಗಿ ದೀಪಾವಳಿಯಲ್ಲಿ ನಡೆಯುವ ಜ್ಯೋತಿ ಸ್ವರೂಪಿಣಿಯಾದ ಲಕ್ಷ್ಮೀ ಪೂಜೆಯನ್ನು ಭಯ ಭಕ್ತಿಯಿಂದ ಮಾಡುತ್ತಾರೆ. ಹಬ್ಬದ ದಿನ ಬೆಳಗ್ಗೆ ಎದ್ದು ಮನೆಯಂಗಳದಲ್ಲಿ ಸಗಣಿ ಸಾರಿಸಿ, ದೀಪಗಳ ರಂಗೋಲಿ ಬಿಡಿಸಿ, ಬಣ್ಣ ಮತ್ತು ಹೂವುಗಳಿಂದ ರಂಗೋಲಿಗೆ



ಅಲಂಕಾರ ಮಾಡುತ್ತಾರೆ. ಮನೆಯ ಹೊಸ್ತಿಲು ಮತ್ತು ದೇವರ ಕೋಣೆಯನ್ನು ಮಾವಿನ ತಳಿರು ತೋರಣಗಳು ಮತ್ತು ಹೂವುಗಳಿಂದ ಅಲಂಕರಿಸುತ್ತಾರೆ. ಹೊಸ ಬಟ್ಟೆ ತೊಟ್ಟು ಬಂಧು-ಮಿತ್ರರು ಮತ್ತು ಸ್ನೇಹಿತರಿಗೆ ದೀಪಾವಳಿಯ ಶುಭಾಶಯ ಹೇಳಿ, ಸ್ನೇಹಿತರೊಂದಿಗೆ ಪಟಾಕಿ ಹೊಡೆಯುತ್ತಾರೆ. ಮನೆಯಲ್ಲಿ ಪೂಜೆ ಪುನಸ್ಕಾರ ಮುಗಿಸಿ ಊಟ ಮಾಡುವ ಹೊತ್ತಿಗೆ ಮಧ್ಯಾಹ್ನ ಆಗುತ್ತದೆ.

ಮನೆಯ ಮುಂದೆ ದೀಪ ಹಚ್ಚುತ್ತೇವೆ. ಮನೆ ಮುಂದೆ ಬೆಳಕಿನ ದೀಪದ ಸೀರಿಯಲ್ ದೀಪದ ಸೆಟ್ ಬಿಡುತ್ತೇವೆ. ಬೆಳಕಿನ ದೀಪಗಳು ಮನೆ ಮುಂದೆ ಬಂದಿವೆ. ಕಷ್ಟದ ಕತ್ತಲನ್ನು ದೀಪದ ಜ್ಯೋತಿಯಿಂದ ದೂರವಾಗಿಸಿಕೊಂಡು ಹೊಸ ಬಾಳಿಗೆ ಹೊಸದೊಂದು ಮುನ್ನುಡಿ ಬರೆಯುವ ಪ್ರಯತ್ನವೇ ಈ ದೀಪಾವಳಿ. ದೀಪ ಹಚ್ಚಿ ಮನೆ ಒಳ ಹೊರಗೆ ದೀಪ ಬೆಳಗಿಸಿ. ಈ ದೀಪದ ಬೆಳಕು ಮುಂದಿನ ದೀಪಾವಳಿಯವರೆಗೂ ನಮ್ಮ ಬದುಕಿನ ದಾರಿ ತೋರಿಸಲಿ. ಜೀವನದಲ್ಲಿ ಏಳು ಬೀಳುಗಳು ಸಹಜ. ಕಷ್ಟ-ಸುಖಗಳು ಒಂದೇ ನಾಣ್ಯದ ಮುಖಗಳು. ಬದಲಾಗುವವರೆಗೂ ಕಾಯುವವರಿಗೆ ಮಾತ್ರ ಸುಖದ ದರ್ಶನವಾಗುವುದು. ಆ ತಾಳ್ಮೆ, ನೆಮ್ಮದಿ ನಮ್ಮಲ್ಲಿರಬೇಕು. ಬನ್ನಿ ಎಲ್ಲರೂ ದೀಪ ಹಚ್ಚೋಣ. ದೀಪಾವಳಿ ತಂದಿರುವ ಈ ದಿವ್ಯ ಜ್ಯೋತಿಯ ದೀಪದಲ್ಲಿ ನಮ್ಮ ಮನೆ ಅಂಗಳದಲ್ಲಿ ದೀಪಗಳನ್ನು ಹಚ್ಚಿ. ಆ ದೀಪದ ಬೆಳಕಿನಲ್ಲಿ ನಾವು ಬದುಕಿನ ಭರವಸೆಗಳನ್ನು ಬೆಳೆಸಿಕೊಳ್ಳೋಣ. ಬೆಳಕಿನ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸೋಣ.



– ವಿ.ಎಂ.ಎಸ್.ಗೋಪಿ.
ಲೇಖಕರು, ಬೆಂಗಳೂರು.

### ಬುಡಕಟ್ಟುಗಳಿಂದ ನಾಡಿನುದ್ದಗಲ ಹರಡಿದ 'ಹಟ್ಟಿ ಹಬ್ಬ'

# ಗ್ರಾಮೀಣ ಸೊಗಡಿನ ಸಂಸ್ಕೃತಿಯ ಕೊಂಡಿ

ಆಧುನಿಕ ಕಾಲದ ಸೋಶಿಯಲ್ ಮೀಡಿಯಾ ಶುಭಾಶಯ ವಿನಿಮಯ ಸಂಸ್ಕೃತಿ ಆಧುನಿಕ ತಂತ್ರಜ್ಞಾನದ ಯುಗದಲ್ಲಿ ಹೊಂದಿಕೊಂಡು ಹೋಗುತ್ತಿರುವುದು ಹಲವರಿಗೆ ಸಂತಸವನ್ನುಂಟು ಮಾಡುತ್ತಿರಬಹುದು. ಆದರೆ ನಮ್ಮ ಹಿರಿಯರು ದೀಪಾವಳಿ ಹಬ್ಬವನ್ನು ತಮ್ಮ ಎಲ್ಲಾ ಕುಟುಂಬದ ಸದಸ್ಯರ ಜೊತೆಗೆ ಸಂತೋಷದಿಂದ ಆಚರಿಸುತ್ತಿರುವುದು ಬಹಳ ವಿರಳವಾಗಿದೆ. ಆದರೂ, ಗ್ರಾಮೀಣ ಪ್ರದೇಶದಲ್ಲಿ ಈ ರೀತಿ ಅಲ್ಪ ಸ್ವಲ್ಪ ಕಾಣುತ್ತಿರುವುದು ಸಂತಸದ ಸಂಗತಿಯಾಗಿದೆ.

ನರಕಚತುರ್ದಶಿಯ ಮುಂಚಿನ ದಿನ ಸಂಜೆ ಹಂಡೆಯನ್ನು ಸ್ವಚ್ಛವಾಗಿ ತೊಳೆದು ಸಿಂಗಾರ ಮಾಡಿ ನೀರು ತುಂಬಿಸಿ ಮರುದಿನ ಮುಂಜಾನೆ ಎಣ್ಣೆಯನ್ನು ಮೈಗೆ ಹಚ್ಚಿ ಸ್ನಾನ ಮಾಡುವ ಮೂಲಕ ಹಬ್ಬದ ಆರಂಭವಾಗುತ್ತದೆ. ಹೀಗೆ ಲಕ್ಷ್ಮೀಪೂಜೆ, ಬಲಿಪಾಡ್ಯಮಿ ದಿನ ಬಲೀಂದ್ರನ ಆರಾಧನೆಯೊಂದಿಗೆ ಹಬ್ಬದ ಸಂಭ್ರಮ ಎಲ್ಲೆಲ್ಲೂ ಮನೆ ಮಾಡುತ್ತಿರುತ್ತದೆ.

ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ದೀಪಾವಳಿ ಹಬ್ಬಕ್ಕೆ 'ಹಟ್ಟಿ ಹಬ್ಬ' ಎಂದೂ ಕರೆಯುತ್ತಾರೆ. ಈ ಸಂದರ್ಭದಲ್ಲಿ 'ಹಟ್ಟೆವ್ವನ ಪೂಜೆ' ಎಂಬ ವಿಶಿಷ್ಟ ಆಚರಣೆ ಇರುತ್ತದೆ. ದೀಪಾವಳಿ ಅಮಾವಾಸ್ಯೆಯ ಮರುದಿನ ಪಾಡ್ಯದಂದು(ಬಲಿಪ್ರತಿಪದ) ಹಟ್ಟಿ ಹಬ್ಬ ಅಥವಾ ಗೂಳವ್ವನ ಹಬ್ಬವೆಂದು ಆಚರಿಸುವುದನ್ನು ಅಲ್ಲಿ ಕಾಣುತ್ತೇವೆ. ಹಟ್ಟಿ ಎಂದರೆ ದನಕರುಗಳನ್ನು ಕಟ್ಟುವ ಸ್ಥಳ ಅಥವಾ ಕೊಟ್ಟಿಗೆ. ಇದನ್ನು ಕಾಯುವ ದೇವತೆಯೇ ಹಟ್ಟೆವ್ವ. ಹಟ್ಟೆವ್ವನ ಸಾಂಕೇತಿಕ ಪ್ರತಿಮೆಗಳನ್ನು ತಯಾರಿಸಲು ಸೆಗಣಿಯನ್ನು ಬಳಸುತ್ತಾರೆ.

ಈ ಹಬ್ಬಕ್ಕೂ ಮಹಾಭಾರತದಲ್ಲಿ ಜರುಗಿದ ಘಟನೆಗೂ ಹೋಲಿಕೆಯುಂಟು. ವಿರಾಟರಾಜನ ಆಸ್ಥಾನದಲ್ಲಿ ಅಜ್ಞಾತವಾಸ ಕಳೆಯುತ್ತಿದ್ದ ಪಾಂಡವರು ವಿರಾಟನ ಗೋವುಗಳನ್ನು ಕೌರವರಿಂದ ಬಿಡಿಸಿಕೊಂಡು ಬಂದಿರುವ ನೆನಪಿನಲ್ಲಿ ಅಂದರೆ ಪಾಂಡವರು ಇದೇ ದಿನ ತಮ್ಮ ಅಜ್ಞಾತವಾಸ ಮುಗಿಸಿ ತಮ್ಮ ಗೋವುಗಳೊಂದಿಗೆ ಪುರಪ್ರವೇಶ ಮಾಡಿದರೆಂಬ ನಂಬಿಕೆಯಿಂದಾಗಿ ಈ ದಿನ ಹಟ್ಟೆವ್ವ ಇಡುವ ಸಂಪ್ರದಾಯವಿದೆ.

ಈ ಹಟ್ಟಿಗಳೇ ಮುಂದೆ ಗ್ರಾಮಗಳಾಗಿ, ಗ್ರಾಮಗಳು ಮುಂದುವರೆದು ನಗರಗಳಾಗಿವೆ. ಹಟ್ಟಿಗಳ ಗುಂಪಿಗೆ ನಾಯಕನಾದವನೇ ಮುಂದೆ ನಾಯಕ, ಗೌಡ, ರಾಜ, ಹಲವು ಹಟ್ಟಿಗಳ ನಾಯಕ ಮಹಾರಾಜ ಈ ರೀತಿಯಾಗಿ



ಸಂಸ್ಕೃತಿ ವಿಕಸನಗೊಳ್ಳುತ್ತಾ ಹೋಗಿದೆ. ಪ್ರಾಚೀನ ನಾಗರಿಕತೆಯ ನಾಯಕರೆಲ್ಲರೂ ಪಶುಪಾಲಕರೇ ಆಗಿದ್ದು ಇಲ್ಲಿ ಕೃಷ್ಣನನ್ನು ಉದಾಹರಿಸಬಹುದು. ಈ ರೀತಿಯ ಆಚರಣೆಗಳಲ್ಲಿ ಪಶುಪಾಲಕರಾದ ಕುರುಬರು ಗೊಲ್ಲರದು ವಿಶಿಷ್ಟ ಆಚರಣೆಗಳಿವೆ ಎನ್ನುವ ಪ್ರತೀತಿ ಇದೆ.

ಈ ಕಾರ್ಯಕ್ಕಾಗಿ ಹಟ್ಟಿಯನ್ನು ಸ್ವಚ್ಚಗೊಳಿಸುವ ಜೊತೆಗೆ ದಿನವಿಡೀ ತಮ್ಮ ದನಕರುಗಳು ಹಾಕಿದ ಸಗಣಿಯನ್ನು ತಿಪ್ಪೆಗುಂಡಿಗೆ ಹಾಕದೇ ತಮಗೆ ಹಟ್ಟಿ ಲೆಕ್ಕವ್ವ ಮೂರ್ತಿ ಹಾಗೂ ಪಾಂಡವರ ಮೂರ್ತಿಗಳನ್ನು ಮಾಡಿ ಇಡಲು ಬೇಕಾಗುವ ಸೆಗಣಿಯನ್ನು ಮಡಿಯಿಂದ ಒಂದೆಡೆ ತಗೆದಿಟ್ಟಿರುತ್ತಾರೆ. ಈ ಸೆಗಣಿಯಿಂದ ಎರಡು ದೊಡ್ಡ ಹಾಗೂ 40ರಿಂದ 50 ಸಣ್ಣ ಹಟ್ಟೆವ್ವಗಳನ್ನು ತಯಾರಿಸಿಡುತ್ತಾರೆ. ಸಣ್ಣ ಸಣ್ಣ 'ಹಟ್ಟೆವ್ವ'ಗಳನ್ನು



ವರ್ತುಲಾಕಾರದಲ್ಲಿ ಅಥವಾ ಚೌಕಾಕಾರದಲ್ಲಿ ಎರಡು ಸಾಲುಗಳಲ್ಲಿ ಇಡುತ್ತಾರೆ. ನಡುವೆ ದಾರಿಯ ರೀತಿಯಲ್ಲಿ ಜಾಗ ಬಿಡುತ್ತಾರೆ. ವರ್ತುಲದ ನಡುವೆ ದೊಡ್ಡ ಹಟ್ಟೆವ್ವಗಳನ್ನು ಇಡುತ್ತಾರೆ. ದೊಡ್ಡ ಹಟ್ಟೆವ್ವನನ್ನು 'ಹಿರೇ ಹಟ್ಟೆವ್ವ' ಎಂದು ಕರೆಯುತ್ತಾರೆ. ಹಿರೇ ಹಟ್ಟೆವ್ವನ ನೆತ್ತಿಯಲ್ಲಿ ಅರಳಿನ ಜೋಳದ ತೆನೆ, ಉತ್ತರಾಣಿ ಕಡ್ಡಿ ಹಾಗೂ ಮೂಗಿಗೆ ಮೂಗುತಿಯಾಗಿ ಮಣಸಿನಕಾಯಿ ಮತ್ತು ಮಾನಿ ಹುಲ್ಲಿನಲ್ಲಿ ಕಡ್ಡಿಗಳಿಂದ ಹೆಣೆದು ತಯಾರಿಸಿದ ನಾಗರ ಹೆಡೆಯನ್ನು ಚುಚ್ಚಿ ಇರಿಸುತ್ತಾರೆ.

ಅದೇ ರೀತಿ ಈ ಹಟ್ಟೆವ್ವಗಳನ್ನು ಅಡುಗೆಮನೆಯ ಬಾಗಿಲಿಗೆ, ದೇವರಮನೆ ಬಾಗಿಲಿಗೆ, ಹಿತ್ತಲ ಬಾಗಿಲಿಗೆ ಮತ್ತು 'ಮುಚ್ಚಿ' ಬಾಗಿಲಿಗೆ (ತ್ರಿಕೋನಾಕಾರದಲ್ಲಿ) ಮೂರು ಮೂರರಂತೆ ಇರಿಸುತ್ತಾರೆ. ಹೀಗೆ ಸಗಣಿಯಿಂದ ಹಟ್ಟೆವ್ವನನ್ನು ಮತ್ತು ಪಾಂಡವರನ್ನು ಮಾಡಿ, ಹಟ್ಟೆವ್ವನನ್ನು ಇಟ್ಟಿರುವ ಸ್ಥಳದವರೆಗೂ ಆಕಳ ಹೆಜ್ಜೆಗಳನ್ನು ತಮ್ಮ ಕೈ ಮುಟಗೀ ಮಾಡಿ ಅದಕ್ಕೆ ಕೆಮ್ಮಣ್ಣು ಮತ್ತು ಬಿಳಿ ಸುಣ್ಣವನ್ನು ಬಳಸಿ ಹೆಜ್ಜೆ ಮೂಡಿಸುತ್ತಾರೆ. ದೇವರ ಜಗಲಿ, ಮುಂದಿನ ಹಿಂದಿನ ಬಾಗಿಲು ಕುಂಟಿ, ರಂಟಿ, ಚಕ್ಕಡಿ ಮೇಲೆ,ಹಗೇವು, ಒಲೆ ಮೇಲೆ, ಬಿಸಿಕಲ್ಲು, ಒಳ್ಳ(ಒರಳು)ಮೇಲೆ ಹಾಗೂ ಹಿತ್ತಲದಾಗ ಕುಂಬಳ ಬಳ್ಳಿ ಹತ್ತಿರ ಹಟ್ಟೆವ್ವನನ್ನು ಅಂದರೆ ಲಕ್ಷ್ಮೀ ಮೂರ್ತಿಮಾಡಿ ಇಡುತ್ತಾರೆ.


ಅವುಗಳಿಗೆ ಉತ್ತರಾಣಿ ಕಡ್ಡಿ, ಹೊನ್ನಾರಿಕೆ ಹೂವು, ಪುಂಡಿ ಹೂ, ಚೆಂಡು ಹೂ, ಗುರೆಳ್ಳು ಹೂ, ಕೋಲಾಣಿ ಹಾಗೂ ಇನ್ನಿತರ ಹಲವು ವಿಧದ ಹೂವುಗಳಿಂದ ಅಲಂಕರಿಸಿ, ಶೃಂಗರಿಸಿ ಎಲ್ಲಾ ಹಟ್ಟೆವ್ವಗಳಿಗೂ ಕುಂಕುಮ, ಮೊಸರು, ಹೂವುಗಳನ್ನು ಮುಡಿಸಿ ಪೂಜಿಸುತ್ತಾರೆ. ಅಂದು ಶ್ಯಾವಿಗೆ ಹಾಗೂ ಅನ್ನವನ್ನು ಮಾಡಿ ಎಡೆ ಹಿಡಿಯುವರು.ಈ ದಿನಗಳಲ್ಲಿ ಶ್ಯಾವಿಗೆ ಊಟ ಮಾಡುವರು.ಸಕ್ಕರೆ ಶ್ಯಾವಿಗೆ ಬೆಲ್ಲದ ಶ್ಯಾವಿಗೆ ಹಾಲು ಹಾಕಿ ಊಟಕ್ಕೆ ಹೆಚ್ಚು ಬಳಕೆ ಮಾಡುವರು.ಇದನ್ನು ಹಟ್ಟಿ ಹಬ್ಬದ ವಿಶೇಷ ಸಿಹಿ ಅಡುಗೆ ಅಂತಾ ಪರಿಗಣಿಸಲಾಗುತ್ತದೆ ಅದೇ ರೀತಿ ಹೋಳಿಗೆ, ಅನ್ನ, ಸಾರು, ತುಪ್ಪ ಇತ್ಯಾದಿಗಳನ್ನು ಅರ್ಪಿಸಿ ತೆಂಗಿನಕಾಯಿ ಒಡೆದು ಹಿರೇ ಹಟ್ಟೆವ್ವನ ಮುಂದೆ ಇಡುತ್ತಾರೆ.

ಸಂಜೆಯ ವೇಳೆಗೆ ಈ ಹಟ್ಟೆವ್ವಗಳನ್ನು ಮನೆಯ ಮಾಳಿಗೆ ಕುಂಬಿಯ ಮೇಲೆ ಹಿತ್ತಲ ಬಾಗಿಲ ಮತ್ತು 'ಮುಚ್ಚಿ' ಬಾಗಿಲ ಮೇಲೆ ಸಾಲಾಗಿ ಇರಿಸುತ್ತಾರೆ. ಹಿರೇ ಹಟ್ಟೆವ್ವಗಳನ್ನು ಬಾಗಿಲ ಮೇಲೆ, ಸಣ್ಣ ಹಟ್ಟೆವ್ವಗಳ ನಡುವೆ ಇರಿಸುತ್ತಾರೆ. ಮತ್ತೊಮ್ಮೆ ಹೂವುಗಳಿಂದ ಅಲಂಕರಿಸುತ್ತಾರೆ.



ಈ ಹಟ್ಟೆವ್ವನ ಪೂಜೆ ಮಾಡುವವರು ಮಹಿಳೆಯರೇ. ಹಳ್ಳಿಯ ಮನೆ ಮನೆಯ ಹಟ್ಟಿ ಕೊಟ್ಟಿಗೆಗಳಲ್ಲಿ ಹಟ್ಟೆವ್ವ ಪೂಜೆಗೊಂಡು ಮನೆ ಮಾಳಿಗೆ ಶೃಂಗಾರಗೊಳ್ಳುತ್ತಿರುವುದು ಕೇವಲ ಅಂಧಾನುಕರಣೆ ಎಂದು ಮೂಗು ಮುರಿಯುವವರು ಇಂದು ಅನೇಕರಿರಬಹುದು.ಆದರೆ ದನಕರುಗಳ ಸೆಗಣಿಯ ಮಹತ್ವವನ್ನು ಸಾರುವ ಮತ್ತು ಸೆಗಣಿಯ ಗೊಬ್ಬರದ ಶ್ರೇಷ್ಠತೆಯನ್ನು ಗೌರವಿಸುವ ರೀತಿಯಲ್ಲಿ ಸೆಗಣಿಯ ಹಟ್ಟೆವ್ವ ದೇವತೆಯಾಗಿ ಪೂಜೆಗೊಳ್ಳುತ್ತಿದ್ದಾಳೆ ಎನ್ನುವುದು ನಮ್ಮ ಕೃಷಿ ಸಂಸ್ಕೃತಿಯ ಹಿರಿಮೆಯ ಸಂಕೇತ. ಇದೆ ಸಂದರ್ಭದಲ್ಲಿ ಹಟ್ಟಿ ಹಬ್ಬದ ಅಂಗವಾಗಿ ನಮ್ಮ ಲಕ್ಷೇಶ್ವರ ತಾಲ್ಲೂಕಿನ ರಾಮಗೇರಿ, ಶಿಗ್ಲಿ, ಗೊಜನೂರ, ಪು ಬಡ್ನಿ ಹಾಗೂ ಇನ್ನಿತರ ಊರಗಳ ಮನೆಯಲ್ಲಿ ಹಟ್ಟೆವ್ವನ ಪೂಜೆ ಸಲ್ಲಿಸಿ, ಮನೆಯವರೆಲ್ಲರೂ ಭಾವಚಿತ್ರ ತೆಗೆಯಿಸುವ ಮೂಲಕ ಯಶಸ್ವಿಯಾಗಿ ಶ್ರದ್ಧೆಯಿಂದ ಆಚರಿಸುವ ವಾಡಿಕೆಯಿದೆ.

ಒಟ್ಟಾರೆಯಾಗಿ ಕಾಲ ಎಷ್ಟೇ ಬದಲಾದರೂ ಆಚರಣೆಗಳು ಇಂದಿಗೂ ಬದುಕಿವೆ. ಮಹಾನಗರಗಳಲ್ಲಿ ಈ ಪದ್ಧತಿ ಮರೆತಿರಬಹುದು ಇತರ ನಗರ,ಪಟ್ಟಣ ಹಳ್ಳಿ ಹಳ್ಳಿಗಳಲ್ಲಿ ಈ ಪದ್ಧತಿ ರೂಢಿಯಿದೆ. ನಮ್ಮ ಉತ್ತರ ಕರ್ನಾಟಕದ ಭಾಗದಲ್ಲಿ ಈ ದಿನ ಭೂ ತಾಯಿಗೆ ನಮಿಸಿ, ಸುಂದರ ಸುಖವಾಗಿ ಜೀವನ ನಡೆಸಲು ಆ ದೇವರಲ್ಲಿ ಪ್ರಾರ್ಥಿಸಲಾಗುತ್ತದೆ.ನಮ್ಮೊಡನೆ ನಮಗೆ ಆಧಾರಸ್ಥಂಭವಾಗಿರುವ ಗೋವುಗಳ ರಕ್ಷಣೆಯ ಮಾಡುವುದು.ಇವುಗಳನ್ನು ಹಬ್ಬಗಳ ಆಚರಣೆಯ ಮೂಲಕ ನಮ್ಮ ಸಂಪ್ರದಾಯವನ್ನು ಪಾಲಿಸಿಕೊಂಡು ಬರುವ ಮೂಲಕ ಹಬ್ಬಗಳು ಇಂದಿಗೂ ಮನೆಮನೆಗಳಲ್ಲಿ ಜರುಗಿ, ನಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಬರುತ್ತಿರುವುದು ಸಂತಸದ ವಿಷಯವೇ ಸರಿ.



– ಬಸವರಾಜ ಎಮ್.ಯರಗುಪ್ಪಿ.
ಲಕ್ಷ್ಮೇಶ್ವರ.

# ಸರಕಾರಿ ಶಾಲೆಗಳ ಅಭಿವೃದ್ಧಿಯೇ ನಮ್ಮ ಗುರಿ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಸರಕಾರಿ ಶಾಲೆಗಳು ಅಭಿವೃದ್ಧಿ ಹೊಂದಿದಾಗ ದೇಶ ಅಭಿವೃದ್ಧಿ ಹೊಂದಲು ಸಹಕಾರಿಯಾಗುತ್ತದೆ. ಸರಕಾರಿ ಶಾಲೆಗಳ ಅಭಿವೃದ್ಧಿಯೇ ನಮ್ಮ ಗುರಿಯಾಗಿದೆ ಎಂದು ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವ ಡಾ. ಎಚ್.ಕೆ. ಪಾಟೀಲ ಹೇಳಿದರು.

ಅವರು ಪಟ್ಟಣದ ಸರಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆ ನಂ 1ರಲ್ಲಿ ಲೋಕೋಪಯೋಗಿ ಇಲಾಖೆಯ 2022/23ನೇ ಸಾಲಿನ ವಿವೇಕ ಶಾಲಾ ಯೋಜನೆಯಡಿ ನಿರ್ಮಾಣವಾದ ನೂತನ ಶಾಲಾ ಕೊಠಡಿಗಳನ್ನು ಉದ್ಘಾಟಿಸಿ ಮಾತನಾಡಿ, ಸರಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಕ ವೃಂದವಿದ್ದು, ಗುಣಮಟ್ಟದ ಶಿಕ್ಷಣ ನೀಡುವ ಜೊತೆಯಲ್ಲಿ ಪ್ರತಿಯೊಂದು ಮಗು ಶಿಕ್ಷಣದಿಂದ ವಚಿಚಿತವಾಗಬಾರದೆಂದು ಸರಕಾರ ಕ್ಷೀರಭಾಗ್ಯ, ಮದ್ಯಾಹ್ನದ ಬಿಸಿ ಊಟ, ಪೌಷ್ಟಿಕಯುಕ್ತ ಪೂರಕ ಆಹಾರ, ಸಮವಸ್ತ್ರ, ಶೂ ಭಾಗ್ಯಗಳನ್ನು ನೀಡುತ್ತಿದೆ. ಈಗಾಗಲೇ ಸರಕಾರ ಸರಕಾರಿ ಶಾಲೆಗಳ ಅಭಿವೃದ್ಧಿಗಾಗಿ ರಾಜ್ಯಾದ್ಯಂತ ಶಿಥಿಲ ಕೊಠಡಿಗಳನ್ನು ಗುರುತಿಸಿ ದುರಸ್ತಿ ಕಾರ್ಯ ಮಾಡುತ್ತಿದೆ ಎಂದರು.

ಪ.ಪಂ ಅಧ್ಯಕ್ಷರಾದ ಯಲ್ಲವ್ವ ಕವಲೂರ, ಪ.ಪಂ ಸ್ಥಾಯಿ ಸಮಿತಿ ಅಧ್ಯಕ್ಷ ಇಮಾಮಸಾಬ ಶೇಖ, ಪ.ಪಂ ಸದಸ್ಯ ಎಸ್.ಸಿ. ಬಡ್ನಿ, ಕೆ.ಎಲ್. ಕರಿಗೌಡರ, ಎಸ್.ಎಂ. ನೀಲಗುಂದ, ಎಂ.ಡಿ. ಬಟ್ಟೂರ, ಡಿಡಿಪಿಐ ಆರ್.ಎಸ್. ಬುರಡಿ, ಬಿಇಓ ವಿ.ವಿ. ನಡುವಿನಮನಿ, ಶಂಕರ ಹಡಗಲಿ, ಅನಿಲ ಜಾಧಾವ, ಶಾಲಾ ಪ್ರಧಾನ ಗುರು ಪಿ.ಬಿ. ಕೆಂಚನಗೌಡರ, ಎಸ್‌ಡಿಎಂಸಿ ಅಧ್ಯಕ್ಷ ವಿ.ಡಿ. ಸಿದ್ದನಗೌಡರ, ಜಿ.ಎಂ. ಗಾಡಿ, ಮಂಜುನಾಥ ಗುಂಜಳ, ಬಿ.ಎಲ್. ಜಾಧಾವ, ರಮೇಶ ಮ್ಯಾಗೇರಿ, ಶಿವಪ್ಪ ಮಡ್ಡಿ, ಮಾರುತಿ ಜಾಧಾವ ಇದ್ದರು.

**ಶೀಘ್ರದಲ್ಲಿ ರೈತರ ಖಾತೆಗೆ ನೇರವಾಗಿ ಬೆಳೆಹಾನಿ ಪರಿಹಾರ: ಜಿಲ್ಲಾಧಿಕಾರಿ ಗೋವಿಂದರೆಡ್ಡಿ**

# ಜಿಲ್ಲಾಡಳಿತ ರೈತರೊಂದಿಗೆ ಇರುತ್ತದೆ

■ವಿಜಯಸಾಕ್ಷಿ ಸುದ್ದಿ, ಡಂಬಳ

ಜಿಲ್ಲೆಯಲ್ಲಿ ಮಳೆಯಿಂದಾಗಿ ಈರುಳ್ಳಿ, ಮೆಕ್ಕೆಜೋಳ, ಮೆಣಸಿನಕಾಯಿ ಬೆಳೆಗಳು ಹೆಚ್ಚು ಹಾನಿಯಾಗಿವೆ. ಇತರೆ ಬೆಳೆ ಕಡಿಮೆ ಪ್ರಮಾಣದಲ್ಲಿ ಹಾನಿಯಾಗಿದೆ. ಶೀಘ್ರದಲ್ಲಿ ರೈತರ ಖಾತೆಗೆ 2 ಹೆಕ್ಟೇರ್‌ವರೆಗೆ ನೇರವಾಗಿ ಬೆಳೆಹಾನಿ ಪರಿಹಾರ ನೀಡಲಾಗುವುದು. ಸರ್ಕಾರದಿಂದ ಈಗಾಗಲೇ ಹಣ ಬಂದಿದ್ದು, ಜಿಲ್ಲಾಡಳಿತ ಸದಾ ಕಾಲ ರೈತರೊಂದಿಗೆ ಇರುತ್ತದೆ ಎಂದು ಜಿಲ್ಲಾಧಿಕಾರಿ ಗೋವಿಂದರೆಡ್ಡಿ ಭರವಸೆ ನೀಡಿದರು.



ರೈತರ ಜಮೀನುಗಳಿಗೆ ಭೇಟಿ ನೀಡಿದರೆ ಮಾತ್ರ ನಮಗೆ ನಿಖರ ಮಾಹಿತಿ ತಿಳಿಯುತ್ತದೆ. ತೋಟಗಾರಿಕೆ, ಕೃಷಿ ಇಲಾಖೆ ಹಾಗೂ ಕಂದಾಯ ಇಲಾಖೆ ಜಂಟಿಯಾಗಿ ಬೆಳೆಹಾನಿ ಸಮೀಕ್ಷೆ ಮಾಡಿ 3–4 ದಿನಗಳಲ್ಲಿ ವರದಿ ಸಲ್ಲಿಸುತ್ತಾರೆ. ಶೇ.33ರಷ್ಟು ಬೆಳೆಹಾನಿಯಾಗಿದ್ದರೂ ಅದು ಸಂಪೂರ್ಣವಾಗಿ ಬೆಳೆಹಾನಿಯಾದಂತೆ. ಒಂದು ಹೆಕ್ಟೇರ್‌ಗೆ 8200 ರೂ ಪರಿಹಾರ ನೀಡಲಾಗುತ್ತದೆ. ಒಬ್ಬ ರೈತ ಎರಡು ಹೆಕ್ಟೇರ್‌ಗೆ ಮಾತ್ರ ಪರಿಹಾರ ಪಡೆಯಲು ಅರ್ಹತೆಯನ್ನು ಹೊಂದಿದ್ದಾರೆ. ಸಿಬ್ಬಂದಿಗಳು ಬೆಳೆಹಾನಿಯಾದ ರೈತರ ಜಮೀನುಗಳಿಗೆ ಭೇಟಿ ನೀಡಿದಾಗ ಆಧಾರ್ ಕಾರ್ಡ್, ಎಫ್‌ಐಡಿ ನಂಬರ್ ನೀಡಬೇಕೆಂದು ಜಿಲ್ಲಾಧಿಕಾರಿಗಳು ಹೇಳಿದರು.

ಡಂಬಳ ಹೋಬಳಿಯ ಕದಾಂಪೂರ, ಪೇಠಾ ಆಲೂರ, ಯಕ್ಲಾಸಪೂರ ಭೇಟಿ ಮತ್ತು ಡಂಬಳ ಗ್ರಾಮದ ರೈತ ಮಹಿಳೆ ಶಾಂತವ್ವ ಬಿಸನಹಳ್ಳಿ ಅವರ ಜಮೀನಿನಲ್ಲಿ ನಿರಂತವಾಗಿ ಮಳೆ ಪರಿಣಾಮ ಹಾನಿಯಾದ ಈರುಳ್ಳಿ ಬೆಳೆಯನ್ನು ಬುಧವಾರ ಪರಿಶೀಲನೆ ಮಾಡಿ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ರೈತ ಮುಖಂಡ ಗೋಣಿಬಸಪ್ಪ ಎಸ್. ಕೊರ್ಲಹಳ್ಳಿ, ತಹಸೀಲ್ದಾರ ಪಿ.ಎಸ್. ಎರಿಸ್ವಾಮಿ, ತೋಟಗಾರಿಕೆ ಉಪ ನಿರ್ದೇಶಕ ಶಶಿಕಾಂತ ಕೋಟೆಮನಿ, ಜಿಲ್ಲಾ ಉಪಕೃಷಿ ನಿರ್ದೇಶಕರಾದ ಸ್ಫೂರ್ತಿ ಜಿ.ಎಸ್., ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಎಂ.ಎಂ. ತಾಂಬೋಟಿ, ಸಹಾಯಕ ತೋಟಗಾರಿಕೆ ಅಧಿಕಾರಿ ನಿಂಗಪ್ಪ ಕುಂಬಾರ, ಸಹಾಯಕ ಕೃಷಿ ನಿರ್ದೇಶಕ ಪ್ರಾಣೇಶ ಹಾದಿಮನಿ, ಡಂಬಳ ಗ್ರಾಮದ ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ ಎಸ್.ವಿ. ರಾಮೇನಹಳ್ಳಿ, ಕಂದಾಯ ನಿರೀಕ್ಷಕ ಪ್ರಭು ಬಾಗಲಿ, ಗ್ರಾಮ ಲೆಕ್ಕಾಧಿಕಾರಿ ಲಕ್ಷ್ಮಣ ಗುಡಸಲಮನಿ, ರೈತರಾದ ಅನಿಲ ಪಲ್ಲೇದ, ಈರಣ್ಣ ನಂಜಪ್ಪನವರ ಇದ್ದರು.

# ಕ್ಷೇತ್ರವಾರು ಮತದಾರರ ಕರಡು ಯಾದಿ ಪ್ರಕಟ

■ವಿಜಯಸಾಕ್ಷಿ ಸುದ್ದಿ, ಧಾರವಾಡ

ಜಿಲ್ಲೆಯ ಎಲ್ಲ ವಿಧಾನಸಭಾ ಮತಕ್ಷೇತ್ರಗಳ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಕಾರ್ಯ ನಡೆದಿದ್ದು, ಜಿಲ್ಲಾ ಚುನಾವಣಾ ಅಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಮತದಾರರ ಕರಡು ಯಾದಿಯನ್ನು ಪ್ರಕಟಿಸಿದರು.



ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆ ಜರುಗಿಸಿ, ಮತದಾರರ ಕರಡು ಯಾದಿಯನ್ನು ವಿತರಿಸಿ ಮಾತನಾಡಿದ ಅವರು, ಭಾರತ ಚುನಾವಣಾ ಆಯೋಗದ ನಿರ್ದೇಶನದ ಮೇರೆಗೆ 01–01–2025ನ್ನು ಅರ್ಹ ದಿನಾಂಕವೆಂದು ಪರಿಗಣಿಸಿ ವಿಧಾನಸಭಾ ಕ್ಷೇತ್ರಗಳ ಮತದಾರರ ಯಾದಿಗಳ ವಿಶೇಷ ಸಂಕ್ಷಿಪ್ತ ಪರಿಷ್ಕರಣೆಯನ್ನು ಕೈಗೊಳ್ಳುವ ಬಗ್ಗೆ ಭಾರತ ಚುನಾವಣಾ ಆಯೋಗವು ವೇಳಾಪಟ್ಟಿಯನ್ನು ಹೊರಡಿಸಿದೆ ಎಂದರು.

ಆಯಾ ವಿಧಾನಸಭಾ ಮತಕ್ಷೇತ್ರದ ನಿಗದಿಪಡಿಸಿದ ಮತಗಟ್ಟೆಗಳಲ್ಲಿ, ಕಚೇರಿ ವೇಳೆಯಲ್ಲಿ ಅಕ್ಟೋಬರ 29ರಿಂದ ನವೆಂಬರ್ 28ರವರೆಗೆ ಮತದಾರರ ಪರಿಶೀಲನೆಗಾಗಿ ಲಭ್ಯವಿರುತ್ತದೆ. ಈ ಅವಧಿಯಲ್ಲಿ ಮತದಾರರು ಮತದಾರರ ಯಾದಿ ಪರಿಶೀಲಿಸಿ, ಮತದಾರರ ಪಟ್ಟಿಗೆ ಹಕ್ಕು ಮತ್ತು ಆಕ್ಷಪಣೆ ಸಲ್ಲಿಸಲು ಅವಕಾಶವಿರುತ್ತದೆ ಎಂದರು.

ನಿಗದಿತ ಕೊನೆಚಿು ದಿನಾಂಕದವರೆಗೆ ಸ್ವೀಕೃತವಾಗುವ ಹಕ್ಕು ಮತ್ತು ಆಕ್ಷೇಪಣೆಗಳನ್ನು ನಿಯಮಾನುಸಾರ ವಿಲೇವಾರಿ ಮಾಡಿ ಚುನಾವಣಾ ಆಯೋಗದ ನಿರ್ದೇಶನದಂತೆ ಅಂತಿಮ ಮತದಾರರ ಪಟ್ಟಿಯನ್ನು 06. 01. 2025 ರಂದು ಪ್ರಕಟಿಸಲಾಗುವದೆಂದು ಜಿಲ್ಲಾ ಚುನಾವಣಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ತಿಳಿಸಿದರು.

# ಸರ್ದಾರ್ ಪಟೇಲರ ದೇಶಪ್ರೇಮ ಅನನ್ಯ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಸರ್ದಾರ್ ವಲ್ಲಭಭಾಯಿ ಪಟೇಲರು ಈ ದೇಶ ಕಂಡ ಅಪ್ರತಿಮ ದೇಶಪ್ರೇಮಿ. ಅವರ ದೇಶಪ್ರೇಮ ಇಂದಿಗೂ ಆದರ್ಶನೀಯ ಎಂದು ಎಂಪಿಜಿಎಸ್ ಶಾಲೆಯ ಮುಖ್ಯ ಶಿಕ್ಷಕ ಬಸವರಾಜ ಕುರಿ ಹೇಳಿದರು.



ಶಾಲೆಯಲ್ಲಿ ಗುರುವಾರ ಆಚರಿಸಲಾದ ಸರ್ದಾರ್ ವಲ್ಲಭಭಾಯಿ ಪಟೇಲರ ಜಯಂತ್ಯುತ್ಸವದಲ್ಲಿ ಅವರು ಮಾತನಾಡಿದರು.

ಸ್ವಾತಂತ್ರ್ಯಾನಂತರದ ಅವರ ದಿಟ್ಟ ನಿರ್ಧಾರಗಳು ಅವರಿಗೆ ಉಕ್ಕಿನ ಮನುಷ್ಯ ಎಂಬ ಬಿರುದನ್ನು ತಂದುಕೊಟ್ಟವು. ದೇಶ ಸ್ವಾತಂತ್ರ್ಯವಾದರೂ ಇನ್ನೂ ಹಾಗೇ ಉಳಿದಿದ್ದ ಅನೇಕ ಸಂಸ್ಥಾನಗಳನ್ನು ದೇಶದಲ್ಲಿ ಐಕ್ಯಗೊಳಿಸಿದ ಮಹಾನ್ ದೂರದೃಷ್ಟಿಯ ನಾಯಕ ಅವರಾಗಿದ್ದರು. ದೇಶ ಯಾವ ಮಾರ್ಗದಲ್ಲಿ ಸಾಗಿದರೆ ಅಭಿವೃದ್ಧಿಯತ್ತ ಸಾಗುತ್ತದೆ ಎಂಬುದರ ಬಗ್ಗೆ ಅವರಲ್ಲಿಯೂ ಅನೇಕ ಕನಸುಗಳಿದ್ದವು. ಆ ಕಸನುಗಳನ್ನು ಸಾಕಾರಗೊಳಿಸಲು ಅವರು ಪಟ್ಟ ಪ್ರಯತ್ನ ಅಷ್ಟಿಷ್ಟಲ್ಲ. ಇಂದಿನ ಮಕ್ಕಳು ಮತ್ತು ಯುವಕರು ಅವರಂತೆ ದೇಶ ಪ್ರೇಮವನ್ನು ಬೆಳೆಸಿಕೊಂಡು ದೇಶದ ಅಭಿವೃದ್ಧಿಗೆ ತಮ್ಮದೇ ಆದ ಕಾಣಿಕೆಯನ್ನು ಕೊಡಬೇಕಿದೆ ಎಂದು ಬಸವರಾಜ ಕುರಿ ಹೇಳಿದರು.

ಈ ಸಂದರ್ಭದಲ್ಲಿ ಮಕ್ಕಳಿಗೆ ಏಕತಾ ಮಂತ್ರದ ಪ್ರಮಾಣ ವಚನವನ್ನು ಬೋಧಿಸಲಾಯಿತು. ಕಾರ್ಯಕ್ರಮದಲ್ಲಿ ಸಿಬ್ಬಂದಿಗಳು ಉಪಸ್ಥಿತರಿದ್ದರು.







ಗೌರವ ಸಮಾದೇಷ್ಟರ ಹುದ್ದೆಯ ನೇಮಕಾತಿಗೆ ಅರ್ಜಿ ಆಹ್ವಾನ

## ಜಿಲ್ಲಾ ಗೃಹರಕ್ಷಕದಳದಲ್ಲಿ ನೇಮಕಾತಿ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಗೃಹರಕ್ಷಕದಳದಲ್ಲಿ ಹಾಲಿ ಖಾಲಿ ಇರುವ ಗೌರವ ಸಮಾದೇಷ್ಟರ ಹುದ್ದೆಗೆ ನೇಮಕ ಮಾಡುವ ಸಂಬಂಧ ಆಸಕ್ತಿಯುಳ್ಳ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ನವೆಂಬರ್ 16ರೊಳಗಾಗಿ ಗದಗ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅರ್ಜಿ ಸಲ್ಲಿಸುವ ಅಭ್ಯರ್ಥಿಯು 50 ವರ್ಷಕ್ಕಿಂತ ಹೆಚ್ಚಿರಬಾರದು. ಅಭ್ಯರ್ಥಿಯು ಸಂಬಂಧಪಟ್ಟ ಜಿಲ್ಲಾ ಕೇಂದ್ರದ 20 ಕಿಮೀ ವ್ಯಾಪ್ತಿಯೊಳಗೆ ನೆಲೆಸಿರಬೇಕು. ದೈಹಿಕವಾಗಿ ಮತ್ತು ವೈದ್ಯಕೀಯವಾಗಿ ಸದೃಢರಾಗಿದ್ದಾರೆಂದು ಜಿಲ್ಲಾ ಶಸ್ತ್ರಚಿಕಿತ್ಸಕರಿಂದ ಪ್ರಮಾಣೀಕರಿಸಬೇಕು. ಸೇವೆಗಳು ಮತ್ತು ಸೇವೆಯ ಕನಿಷ್ಠ ಅವಧಿ, ಪ್ರಮಾಣಪತ್ರದ ಶೌರ್ಯ ಪ್ರಶಸ್ತಿಯು ಅದೇ ಆದ್ಯತೆಯ ಕ್ರಮದಲ್ಲಿ, ಕೆಳಗೆ ನಿರ್ದಿಷ್ಟಪಡಿಸಿದಂತೆ ಇರುತ್ತದೆ.

ಮಿಲಿಟರಿ ಸೇವೆ-ಐದು ವರ್ಷಗಳ ತೃಪ್ತಿಕರ ಸೇವೆ, ಪ್ಯಾರಾ ಮಿಲಿಟರಿ ಸೇವೆ- ಐದು ವರ್ಷಗಳ ತೃಪ್ತಿಕರ ಸೇವೆ, ಪೊಲೀಸ್ ಸೇವೆ- ಐದು ವರ್ಷಗಳ ತೃಪ್ತಿಕರ ಸೇವೆ, ಶೌರ್ಯ ಪ್ರಶಸ್ತಿ ಪುರಸ್ಕೃತರು, ಎನ್.ಸಿ.ಸಿ." ಸಿ" ಪ್ರಮಾಣಪತ್ರ ಹೊಂದಿರುವವರು.

ರಾಜ್ಯ ಸರ್ಕಾರದ ಆದೇಶಕ್ಕೆ ಒಳಪಟ್ಟು ಕಮಾಂಡೆಂಟ್‌ಗಳ ಅಧಿಕಾರದ ಅವಧಿಯು ಸಾಮಾನ್ಯವಾಗಿ ಐದು ವರ್ಷಗಳ ಅವಧಿಗೆ ಇರುತ್ತದೆ. ಕಮಾಂಡೆಂಟ್ ಹುದ್ದೆಯಲ್ಲಿ ಮುಂದುವರಿಯಲು ವೈದ್ಯಕೀಯವಾಗಿ ಅಥವಾ ದೈಹಿಕವಾಗಿ ಅನರ್ಹರಾಗಿದ್ದರೆ ಅಥವಾ ಅವರು ಸ್ವಯಂಪ್ರೇರಣೆಯಿಂದ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದರೆ ಅಥವಾ ಅವರು ಕ್ರಿಮಿನಲ್ ಅಪರಾಧದಲ್ಲಿ ಭಾಗಿಯಾಗಿದ್ದರೆ ಅಥವಾ ಅವರು ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರೆ, ಅಧಿಕೃತ ಸ್ಥಾನ ಮತ್ತು ಸಂಪನ್ಮೂಲಗಳ ದುರುಪಯೋಗದಲ್ಲಿ ತೊಡಗಿಸಿಕೊಂಡಿದ್ದರೆ, ಹಣಕಾಸಿನ ಅವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದರೆ ನೇಮಕವಾಗಿದ್ದ ಕಮಾಂಡೆಂಟ್ ಅನ್ನು ಅವರ ಹುದ್ದೆಯಿಂದ ವಜಾಗೊಳಿಸಲು ಪೊಲೀಸ್ ಮಹಾನಿರ್ದೇಶಕರು ಮತ್ತು ಕಮಾಂಡೆಂಟ್ ಜನರಲ್ ಸರ್ಕಾರಕ್ಕೆ ಶಿಫಾರಸು ಮಾಡಬಹುದಾಗಿದೆ.

ಕಮಾಂಡೆಂಟ್ ಹುದ್ದೆಗೆ ಸರಕಾರದಿಂದ ಯಾವುದೇ ಸಂಬಳವನ್ನು ನೀಡಲಾಗುವುದಿಲ್ಲ. ಈ ಹುದ್ದೆಯು ಸಂಪೂರ್ಣವಾಗಿ ಗೌರವದ (ಸ್ವಯಂ ಸೇವಾ ಅಧಾರದ ಮೇಲೆ) ಮೇಲೆ ಇರುತ್ತದೆ. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ಜಿಲ್ಲಾದಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳಾದ ಗೋವಿಂದರೆಡ್ಡಿ ತಿಳಿಸಿದ್ದಾರೆ.

ಅರ್ಜಿ ಸಲ್ಲಿಸುವ ಅಭ್ಯರ್ಥಿಯ ಶೈಕ್ಷಣಿಕ ಅರ್ಹತೆಯಲ್ಲಿ ಪದವಿ ಪಡೆದಿರಬೇಕು. ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಯಾವುದೇ ರಾಜಕೀಯ ಪಕ್ಷ ಅಥವಾ ಸಂಘಟನೆಯೊಂದಿಗೆ ಗುರುತಿಸಿಕೊಂಡಿರಬಾರದು ಹಾಗೂ ಅಂತಹ ರಾಜಕೀಯ ಪಕ್ಷ ಅಥವಾ ಸಂಘಟನೆಗಳ ಚಟುವಟಿಕೆಯಲ್ಲಿ ಭಾಗವಹಿಸಿರಬಾರದು. ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಯಾವುದೇ ಅಪರಾಧಕ್ಕಾಗಿ ಅಥವಾ ಯಾವುದೇ ನ್ಯಾಯಾಲಯ ಅಥವಾ ವಿಚಾರಣೆಯ ಆಯೋಗದಿಂದ ದೋಷಾರೋಪಣೆ ಮಾಡಲ್ಪಟ್ಟಿರತಕ್ಕದ್ದಲ್ಲ.

ದೀಪಗಳ ಹಬ್ಬ ದೀಪಾವಳಿಗೆ ಖರೀದಿ ಭರಾಟೆ ಜೋರು

# 'ತುಟ್ಟಿ' ಜಪದ ನಡುವೆಯೇ ಖರೀದಿ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ



ದೀಪಗಳ ಹಬ್ಬ ದೀಪಾವಳಿಗೆ ನರೇಗಲ್ಲ ಮಾರುಕಟ್ಟೆಯಲ್ಲಿ ಖರೀದಿಯ ಭರಾಟೆ ಜೋರಾಗಿತ್ತು. ದೀಪಾವಳಿಯನ್ನು ಹಬ್ಬಗಳ ರಾಜ ಎಂದು ಕರೆಯಲಾಗುತ್ತದೆ. ಇಂದು ಅನೇಕರು ಈ ಹಬ್ಬವನ್ನು ನರಕ ಚತುರ್ದಶಿಯೆಂದು ಆಚರಿಸಿದರೆ ಮತ್ತೆ ಕೆಲವರು ಈ ಹಬ್ಬವನ್ನು ಹಿರಿಯರ ಹಬ್ಬವೆಂದು ಆಚರಿಸುತ್ತಾರೆ.

ನರಕಾಸುರ ಎಂಬ ಅಸುರನನ್ನು ಶ್ರೀಕೃಷ್ಣನು ಸಂಹಾರ ಮಾಡಿ ಬಂದ ನಿಮಿತ್ತ ಈ ದಿನವನ್ನು ನರಕ ಚತುರ್ದಶಿ ಎಂದು ಆಚರಿಸಲಾಗುತ್ತಿದೆ. ಮನೆ, ಮನೆಗಳಲ್ಲಿ ನಸುಕಿನ ಜಾವದಲ್ಲಿ ಮನೆಯ ಗಂಡಸರಿಗೆ ಆರುತಿ ಮಾಡಿ ಮಹಿಳೆಯರು ಸಂಭ್ರಮ ಪಡುತ್ತಾರೆ. ಇನ್ನು ಕೆಲವರು ಹಿರಿಯರನ್ನು ನೆನೆಯುವ ಹಬ್ಬವೆಂದು ಹಿರಿಯರ ಹಬ್ಬವನ್ನಾಗಿ ಆಚರಿಸುತ್ತಾರೆ. ಈ ಹಬ್ಬಗಳಿಗೆ ಬೇಕಾಗುವ ಹೂವು, ಹಣ್ಣು, ಕಾಯಿ, ಆಕಾಶ ಬುಟ್ಟಿ ಮುಂತಾದ ವಸ್ತುಗಳೊಂದಿಗೆ ಬಾಳೆ ದಿಂಡುಗಳು, ಚಂಡು ಹೂಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿದ್ದವು. ಇವುಗಳ ಖರೀದಿಯಲ್ಲಿ ಜನ ತೊಡಗಿರುವುದು ಕಂಡು ಬಂದಿತು. ಈ ಸಾರೆ ಮಳೆ ಕೂಡ ಹೆಚ್ಚಾಗಿ ಸುರಿದ್ದರಿಂದ ರೈತರು ಬೆಳೆದಿದ್ದ ಚಂಡು ಹೂವು ನಿರೀಕ್ಷಿತ ಪ್ರಮಾಣದಲ್ಲಿ ರೈತರ ಕೈಗೆ ಬಾರದೆ, ಮಾರುಕಟ್ಟೆಗೂ ಆವಕ ಕುಂಠಿತವಾಗಿದ್ದರಿಂದ ಈ ಸಾರೆ ಚಂಡು ಹೂವಿನ ಬೆಲೆ ಸ್ವಲ್ಪ ಹೆಚ್ಚಾಗಿತ್ತು.



> ನಮ್ಮ ಸಂಪ್ರದಾಯಗಳನ್ನು ನಾವು ಬಿಡುವಂತಿಲ್ಲ. ಹಿರಿಯರು ಮಾಡಿಕೊಂಡು ಬಂದ ನೇಮಗಳನ್ನು ನಾವು ಪಾಲಿಸಿಕೊಂಡು, ಅದನ್ನು ನಮ್ಮ ಮುಂದಿನ ಪೀಳಿಗೆಗೆ ಪರಿಚಯಿಸಿಕೊಂಡು ಹೋಗಲೇಬೇಕಿದೆ. ಅದಕ್ಕಾಗಿ ತುಟ್ಟಿ ಎಂಬ ಮಾತನ್ನು ಬದಿಗಿಟ್ಟು ವಸ್ತುಗಳನ್ನು ಖರೀದಿ ಮಾಡುತ್ತಿದ್ದೇವೆ. ವಸ್ತುಗಳು ಏನೇ ತುಟ್ಟಿಯಾದರೂ ಹಬ್ಬ ಆಚರಿಸಿದಾಗ ಸಿಗುವ ಆನಂದದ ಮುಂದೆ ಅದೆಲ್ಲವೂ ಗೌಣ ಎನಿಸುತ್ತದೆ.
>
> **– ಚನ್ನಬಸಪ್ಪ ಕುಷ್ಟಗಿ.**
> ರೈತರು.

ಕಳೆದ ದೀಪಾವಳಿ ಹಬ್ಬಕ್ಕೆ ಹೋಲಿಸಿದರೆ ಈ ಸಾರೆ ಎಲ್ಲವೂ ತುಟ್ಟಿಯಾಗಿವೆ ಎಂಬ ಭಾವನೆ ಎಲ್ಲರಲ್ಲಿಯೂ ಇತ್ತು. ಹಾಗೆಂದು ಹಬ್ಬವನ್ನು ಬಿಡುವಂತಿಲ್ಲ. ಆದ್ದರಿಂದ ಅನಿವಾರ್ಯವಾಗಿ ಜನತೆ ಖರೀದಿಗೆಂದು ಮಾರುಕಟ್ಟೆಗೆ ಬಂದಿದ್ದರು. ಕೆಲವರು ಅಮವಾಸ್ಯೆಯಂದು ಶ್ರೀಲಕ್ಷ್ಮಿ ಪೂಜೆಯನ್ನು ಮಾಡಿದರೆ, ಇನ್ನು ಕೆಲವರು ಪಾಡ್ಯಮಿಯಂದು ಶ್ರೀಲಕ್ಷ್ಮಿಯ ಪೂಜೆ ಮಾಡುತ್ತಾರೆ. ನರಕ ಚತುರ್ದಶಿಯ ದಿನ ಸಂಜೆ ಅಮವಾಸ್ಯೆ ಬಂದಿರುವದರಿಂದ ಕೆಲವರು ಗುರುವಾರವೇ ಶ್ರೀಲಕ್ಷ್ಮಿಯ ಪೂಜೆ ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಿರುವುದು ಕಂಡು ಬಂದಿತು.

## ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಪಂಗಡಗಳ ಆರ್ಥಿಕ ಅಭಿವೃದ್ಧಿಗಾಗಿ 2024-25ನೇ ಸಾಲಿನಲ್ಲಿ ಸ್ವಯಂ ಉದ್ಯೋಗ ನೇರ ಸಾಲ ಯೋಜನೆ, ಉದ್ಯಮಶೀಲತಾ ಅಭಿವೃದ್ಧಿ ಯೋಜನೆ, ಮೈಕ್ರೋ ಕ್ರೆಡಿಟ್ (ಪ್ರೇರಣಾ ಯೋಜನೆ), ಗಂಗಾ ಕಲ್ಯಾಣ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ನವೆಂಬರ್ 23ಆಗಿದ್ದು ವೆಬ್‌ಸೈಟ್ https://sevasindhu.karnataka.gov.in ಮೂಲಕ ಅರ್ಜಿ ಸಲ್ಲಿಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರ ಕಾರ್ಯಾಲಯ, ಜಿಲ್ಲಾ ಆಡಳಿತ ಭವನ, 1 ನೇ ಮಹಡಿ ರೂಂ ನಂ. 122/5 ಗದಗ ದೂರವಾಣಿ ಸಂಖ್ಯೆ-08372-239557 ಇವರನ್ನು ಸಂಪರ್ಕಿಸಬಹುದಾಗಿದೆ. ಅಥವಾ ನಿಗಮದ ವೆಬ್‌ಸೈಟ್ ಅಥವಾ ಕಲ್ಯಾಣಮಿತ್ರ ಏಕೀಕೃತ ಎಸ್‌ಸಿ/ಎಸ್‌ಟಿ ಸಹಾಯವಾಣಿ-9482300400 ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಬಿಜೆಪಿ-ಜೆಡಿಎಸ್‌ನಲ್ಲಿ ಭವಿಷ್ಯ ಇಲ್ಲದೇ ಹಲವರು ಕಾಂಗ್ರೆಸ್ ಸೇರ್ತಿದ್ದಾರೆ: ಡಿಸಿಎಂ. ಡಿಕೆಶಿ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಬಿಜೆಪಿ-ಜೆಡಿಎಸ್‌ನಲ್ಲಿ ಭವಿಷ್ಯ ಇಲ್ಲದೇ ನೂರಾರು ಮಂದಿ ಕಾಂಗ್ರೆಸ್ ಸೇರುತ್ತಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹೇಳಿದ್ದಾರೆ.

ಈ ಸಂಬಂಧ ಮಾತನಾಡಿದ ಅವರು, ಬಿಜೆಪಿ ಹಾಗೂ ಜೆಡಿಎಸ್ ಪಕ್ಷದಲ್ಲಿ ಭವಿಷ್ಯವಿಲ್ಲ ಎಂಬ ಕಾರಣಕ್ಕೆ ಆ ಪಕ್ಷದ ಮುಖಂಡರು, ಕಾರ್ಯಕರ್ತರು ಗುಂಪು ಗುಂಪಾಗಿ ಕಾಂಗ್ರೆಸ್ ಸೇರುತ್ತಿದ್ದಾರೆ ಎಂದರು.


ಕುಮಾರಸ್ವಾಮಿ ತನ್ನ ಸ್ಥಾನವನ್ನೇ ಉಳಿಸಿಕೊಳ್ಳುವುದು ಕಷ್ಟವಾಗಿದೆ. ಬಿಜೆಪಿ ನಾಯಕರೇ ಕುಮಾರಸ್ವಾಮಿ ಅವರಿಗೆ ಉತ್ತರ ನೀಡುತ್ತಾರೆ. ಅವರ ಪಕ್ಷ ಗಟ್ಟಿಯಾಗಿ ಉಳಿಯುತ್ತದೆಯೋ ಇಲ್ಲವೋ ಎಂಬುದನ್ನು ಸಮಯ ಬಂದಾಗ ಉತ್ತರ ನೀಡುತ್ತೇನೆ.

ಬಿಜೆಪಿಯಲ್ಲಿ ಅವರನ್ನು ಯಾವ ರೀತಿ ನಡೆಸಿಕೊಳ್ಳುತ್ತಿದ್ದಾರೆ ಎಂದೂ ಗೊತ್ತಿದೆ. ಜೆಡಿಎಸ್ ಹಾಗೂ ಬಿಜೆಪಿ ಪಕ್ಷದಲ್ಲಿ ಭವಿಷ್ಯವಿಲ್ಲ ಎಂಬ ಕಾರಣಕ್ಕೆ ಗುಂಪು ಗುಂಪಾಗಿ ಆ ಪಕ್ಷದ ಕಾರ್ಯಕರ್ತರು ಕಾಂಗ್ರೆಸ್ ಸೇರುತ್ತಿದ್ದಾರೆ. ಎಲ್ಲೋ ಹಳ್ಳಿಗಳಲ್ಲಿ ಭಿನ್ನಾಭಿಪ್ರಾಯದಿಂದ ಒಂದಿಬ್ಬರು ಮಾತ್ರ ನಮ್ಮ ಪಕ್ಷ ಬಿಟ್ಟಿರಬಹುದು ಎಂದರು.

ಐದು ಬೆರಳು ಸೇರಿ ಕೈ ಮುಷ್ಟಿಯಾಯಿತು, ಐದು ಗ್ಯಾರಂಟಿ ಸೇರಿ ಕೈ ಗಟ್ಟಿಯಾಯಿತು. ಕಾಂಗ್ರೆಸ್ ಪಕ್ಷದಿಂದ ಮಾತ್ರ ಜನರಿಗೆ ಒಳ್ಳೆಯದಾಗಲು ಸಾಧ್ಯ ಎಂದು ಯೋಗೇಶ್ವರ್ ಅವರು ಕಾಂಗ್ರೆಸ್ ಪಕ್ಷ ಸೇರಿದ್ದಾರೆ ಎಂದು ತಿಳಿಸಿದರು.







**ಅಜ್ಞಾನದ ಕತ್ತಲೆ ತೊಲಗಿಸಿ ಜ್ಞಾನದ ಬೆಳಕು ಪಸರಿಸುವ ದೀಪಾವಳಿ**

# ದೀಪಾವಳಿ ಹಬ್ಬ ಹಿಗ್ಗು ನೀಡಲಿ



ಶುಭಂ ಕರೋತಿ ಕಲ್ಯಾಣಂ ಆರೋಗ್ಯ ಧನ ಸಂಪದಂ ।
ಶತ್ರುಬುದ್ಧಿ ವಿನಾಶಾಯ ದೀಪಜ್ಯೋತಿರ್ನಮೋಸ್ತುತೆ॥

ನಾವು ಹಚ್ಚುವ ದೀಪದ ಬೆಳಕಿನಿಂದ ನಮ್ಮೊಳಗಿನ ಅಜ್ಞಾನ, ಅವಿವೇಕ, ದುಷ್ಟಗುಣಗಳು ನಾಶವಾಗಿ ಸದ್ಗುಣಗಳು ಹೆಚ್ಚಲಿ, ಎಲ್ಲೆಡೆ ಶಾಂತಿ, ಸಮೃದ್ಧಿ ನೆಲೆಸಲಿ. ದೀಪದಲ್ಲಿ ದೇವರ ರೂಪ ಕಾಣಿಸಲಿ ಎಂದು ಆಶಿಸುತ್ತಾ ದೀಪಗಳಿಗೆ ನಮಸ್ಕರಿಸಬೇಕು ಎಂಬ ಅರ್ಥವನ್ನು ಈ ಶ್ಲೋಕವು ಒಳಗೊಂಡಿದೆ.

ಎಲ್ಲರ ಬದುಕಿನಲ್ಲಿ ಬೆಳಕಿಗೆ ಅದರದೇ ಆದ ಮಹತ್ವವಿದೆ. ಅಂತರಂಗದ ಬೆಳಕು ನಮ್ಮ ಜೀವನಕ್ಕೆ ದಾರಿ ತೋರಿದರೆ ಬಹಿರಂಗದ ಬೆಳಕು ಜಗತ್ತನ್ನು ಕಾಣಲು, ಅನುಭವಿಸಲು ನೆರವಾಗುತ್ತದೆ. ಬೆಳಕೆಂದರೆ ಜ್ಞಾನ, ಅರಿವು, ತಿಳುವಳಿಕೆಯಾಗಿದೆ. ದೀಪ ಮತ್ತು ಅವಳಿ ಎಂಬೆರಡು ಪದದಿಂದ ದೀಪಾವಳಿ ಎಂದಾಗಿದೆ. ದೀಪ ಎಂದರೆ ಹಣತೆ, ಬೆಳಕು. ಅವಳಿ ಎಂದರೆ ಸಾಲು ಎಂದರ್ಥ. ಸಾಲು ಸಾಲಾಗಿ ದೀಪಗಳನ್ನಿಟ್ಟು ಸಂಭ್ರಮದಿಂದ ಆಚರಿಸುವ ಹಬ್ಬ ದೀಪಾವಳಿಯಾಗಿದೆ.

ದೀಪಾವಳಿ ಹಬ್ಬದ ಪ್ರಯುಕ್ತ ಮನೆಗಳನ್ನು ಸ್ವಚ್ಛಗೊಳಿಸಿ ಸುಣ್ಣ-ಬಣ್ಣಗಳಿಂದ ಅಲಂಕರಿಸುತ್ತಾರೆ. ಮನೆಯ ಬಾಗಿಲಿಗೆ ಮಾವಿನ ತೋರಣ, ವಿವಿಧ ಹೂವುಗಳಿಂದ ಶೃಂಗರಿಸುತ್ತಾರೆ. ಅಂಗಳದಲ್ಲಿ ವಿವಿಧ ಬಣ್ಣಗಳಿಂದ ಚೆಲುವಿನ ಚಿತ್ತಾರದ ರಂಗವಲ್ಲಿಯ ಬಿಡಿಸಿ ಹರ್ಷಿಸುತ್ತಾರೆ. ನಮ್ಮ ಜೀವನದ ಅವಿಭಾಜ್ಯ ಅಂಗವಾದ ಗೋವುಗಳನ್ನು ಪೂಜಿಸುತ್ತಾರೆ. ಗೃಹಿಣಿಯರು ವಿವಿಧ ರೀತಿಯ ಸಿಹಿ ತಿನಿಸುಗಳನ್ನು ತಯಾರಿಸಿ ಬಂಧು-ಬಾಂಧವರಿಗೆ ಹಂಚುತ್ತಾರೆ. ಮಕ್ಕಳು ಹೊಸಬಟ್ಟೆ ತೊಟ್ಟು ಪಟಾಕಿ ಹಾರಿಸಿ ಸಂಭ್ರಮಿಸುತ್ತಾರೆ. ಎಲ್ಲರ ಮನೆಗಳಲ್ಲೂ ವಿವಿಧ ಬಣ್ಣದ, ವಿವಿಧ ಆಕಾರದ ಆಕಾಶಬುಟ್ಟಿಗಳು ನೋಡುಗರ ಕಣ್ಮನ ಸೆಳೆಯುತ್ತವೆ.

ದೀಪಾವಳಿಯ ಹಬ್ಬದ ಮೊದಲನೇ ದಿನ ಕಾರ್ತಿಕ ಮಾಸದ ಧನತ್ರಯೋದಶಿಯಂದು ರಾತ್ರಿ ನೀರು ತುಂಬುವ ಹಬ್ಬ ಆಚರಿಸುತ್ತಾರೆ. ಮನೆಗಳಲ್ಲಿನ ನೀರು ತುಂಬಲು ಉಪಯೋಗಿಸುವ ಕೊಡ, ಹಂಡೆ ಮುಂತಾದ ಪರಿಕರಗಳನ್ನು ಸ್ವಚ್ಛಗೊಳಿಸಿ ಪೂಜೆ ಮಾಡುತ್ತಾರೆ. ಮರುದಿನ ನರಕ ಚತುರ್ದಶಿ. ಅಂದು ಶ್ರೀ ಕೃಷ್ಣ ಪರಮಾತ್ಮನು ದುಷ್ಟ ನರಕಾಸುರನನ್ನು ಸಂಹರಿಸಿ ಬಂಧಿತರಾಗಿದ್ದ 16,000 ಸ್ತ್ರೀಯರನ್ನು ಸೆರೆವಾಸದಿಂದ ಬಿಡಿಸಿಕೊಂಡು ಬಂದ ದಿನವಾಗಿದೆ. ಇದು ನರಕಾಸುರನ ಅಸುರೀಗುಣದ ಮೇಲೆ ದೈವತ್ವದ ವಿಜಯದ ಸಂಕೇತವಾಗಿ ಆಚರಿಸುವ ದಿನ. ಅಂದು ಸೂರ್ಯೋದಯಕ್ಕೆ ಮುಂಚೆಯೇ ಮನೆ ಮಂದಿಯೆಲ್ಲ ಆರತಿ ಮಾಡಿಸಿಕೊಂಡು ದೇವಾಲಯಕ್ಕೆ ತೆರಳಿ ಗುರು ಹಿರಿಯರ ದರ್ಶನ ಪಡೆಯುತ್ತಾರೆ.

ನಂತರದ ದಿನ ದೀಪಾವಳಿ ಅಮವಾಸ್ಯೆ. ಅಮವಾಸ್ಯೆಯಂದು ಮನೆ ಹಾಗೂ ಅಂಗಡಿಗಳಲ್ಲಿ ಭಾಗ್ಯದೇವತೆಯಾದ ಲಕ್ಷ್ಮೀ ದೇವಿಯನ್ನು ಪೂಜಿಸುತ್ತಾರೆ. ಲಕ್ಷ್ಮೀ ದೇವಿಯು ಧನ-ಧಾನ್ಯ, ವಿದ್ಯೆ, ಸಂತಾನ, ವಿಜಯ, ಆರೋಗ್ಯ, ಶಾಂತಿ ಹಾಗೂ ಬಲದ ಪ್ರತೀಕವಾಗಿದ್ದಾಳೆ. ಈ ಎಲ್ಲ ಶಕ್ತಿಗಳನ್ನು ಕರುಣಿಸಲೆಂದು ಎಲ್ಲರೂ ಲಕ್ಷ್ಮೀದೇವಿಯನ್ನು ಭಕ್ತಿಭಾವಗಳಿಂದ ನಿರ್ಮಲಚಿತ್ತರಾಗಿ ಪೂಜಿಸುತ್ತಾರೆ. ಮರುದಿನ ಬಲಿಪಾಡ್ಯಮಿ. ವಾಮನರೂಪ ಶ್ರೀ ಹರಿಯು ಬಲಿ ಚಕ್ರವರ್ತಿಯನ್ನು ಪಾತಾಳಲೋಕಕ್ಕೆ ಕಳುಹಿಸಿದ್ದರ ಪ್ರತೀಕವಾಗಿ ಬಲಿಪಾಡ್ಯ ಆಚರಿಸುತ್ತಾರೆ. ತದನಂತರ ಹೀಗೆ ಭಾವಬಿದಿಗೆ, ಅಕ್ಕನ ತದಿಗೆ, ಅಮ್ಮನ ಚವತಿ, ಕಡೆಯ ಪಂಚಮಿ ಎಂದು ಒಂದೊಂದು ದಿನ ಒಂದೊಂದು ರೀತಿ ಹಬ್ಬ ಆಚರಿಸುತ್ತಾರೆ.

ದೀಪಾವಳಿಯು ಬಡವ, ಬಲ್ಲಿದ, ಚಿಕ್ಕವರು, ದೊಡ್ಡವರೆನ್ನುವ ಬೇಧಭಾವವಿಲ್ಲದೇ ಸಂತೋಷದಿಂದ ಆಚರಿಸುವ ಹಬ್ಬವಾಗಿದೆ. ದೀಪಾವಳಿಯು ಬದುಕಿನ ಅಂಧಕಾರವನ್ನು ತೊಲಗಿಸಿ ಜ್ಞಾನದ ಬೆಳಕನ್ನು ಸರ್ವರಿಗೂ ನೀಡಲಿ. ಪರಿಸರ ಪ್ರೇಮಿ ಪಟಾಕಿ ಹಾರಿಸುವ ಮೂಲಕ ಪರಿಸರ ಸಂರಕ್ಷಿಸುವುದು ಎಲ್ಲ ಕರ್ತವ್ಯವಾಗಲಿ. ಯಾಂತ್ರಿಕ ಬದುಕಿನ ಒತ್ತಡವನ್ನು ಬದಿಗಿಟ್ಟು ಹಬ್ಬ-ಹರಿದಿನಗಳನ್ನು ಅರ್ಥಪೂರ್ಣವಾಗಿ ಆಚರಿಸುವ ಮನೋಭಾವನೆ ಸರ್ವರಲ್ಲಿ ಬರಲಿ. ಮನುಕುಲ ಶಾಂತಿಯಿಂದ ಬದುಕುವಂತೆ ಭಗವಂತನು ಅನುಗ್ರಹಿಸಲಿ.

**– ಅಂಜನಾ ರಾಘವೇಂದ್ರ ಕುಬೇರ.**
ಗದಗ.






VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka